ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : *ವಿಧೇಯಕವನ್ನು ಮಂಡಿಸಲಾಗಿದೆ* ಅನುಬಂಧ–III

(ii) ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ, 2003

ಶ್ರೀ ಡಿ.ಕೆ.ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:–

"2003ನೇ ಸಾಲಿನ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸುತ್ತೇನೆ".

ಅಧ್ಯಕ್ಷರು : *ವಿಧೇಯಕವನ್ನು ಮಂಡಿಸಲಾಗಿದೆ* ಅನುಬಂಧ–IV

(iii) ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ, 2003

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2003ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸದನದ ಮುಂದೆ ಮಂಡಿಸುತ್ತೇನೆ".

ಅಧ್ಯಕ್ಷರು : *ವಿಧೇಯಕವನ್ನು ಮಂಡಿಸಲಾಗಿದೆ* ಅನುಬಂಧ–V

(ಅ) ಪರ್ಯಾಲೋಚನಾ ಪ್ರಸ್ತಾವ

(ii) ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕ, 2002.

3.40 ಪಿಎಂ

ಶ್ರೀ ಆರ್.ವಿ. ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, "2002ನೇ ಸಾಲಿನ ಕರ್ನಾಟಕ ಕೈಗಾರಿಕಾ ಸೌಲಭ್ಯ ವಿಧೇಯಕವನ್ನು ಭಾರತದ ರಾಷ್ಟ್ರಪತಿಯವರಿಂದ ಹಿಂದಿರುಗಿಸಿದ್ದ ಮೇರೆಗೆ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವದ ಬಗ್ಗೆ ವಿವರಿಸಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಈ ಮಸೂದೆ ಈ ಮನೆಯಲ್ಲಿ ಪಾಸಾಗಿತ್ತು, ಭಾರತ ರಾಷ್ಟ್ರಪತಿಯವರ ಅನುಮತಿಗಾಗಿ ನಾವು ಕಳುಹಿಸಿದಾಗ ಭಾರತ ಸರ್ಕಾರ ಕೆಲವು ಸಣ್ಣ ತಿದ್ದುಪಡಿಗಳನ್ನು ಮಾಡಬೇಕೆಂದು ಸೂಚಿಸಿ ವಾಪಸ್ ಕಳುಹಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ ಮೂಲ ವಿಧೇಯಕದಲ್ಲಿ ಕ್ಲಾಸ್ (2) ಏನಿದೆ ಮೂಲ ವಿಧೇಯಕದಲ್ಲಿ ಅಲ್ಲಿ ಕೆಲವು ಕಾಯಿದೆಗಳನ್ನು ನಾವು ಕಾನೂನುಗಳನ್ನಾಗಿ ಮಾಡಿದ್ದೇವೆ. ಅದರಲ್ಲಿ ಕೆಲವು ಸೆಂಟ್ರಲ್ ಆಕ್ಟ್‌ಗಳನ್ನು ಆ್ಯಡ್ ಮಾಡಿ ಎಂದು ಅವರು ಹೇಳುತ್ತಿದ್ದಾರೆ. ಎಂಪ್ಲಾಯೀಸ್ ಸ್ಟೇಟ್ ಇನ್‌ಶ್ಯೂರೆನ್ಸ್ ಆಕ್ಟ್, ಮಿನಿಮಮ್ ವೇಜಸ್, ಪೇಮೆಂಟ್ ಆಫ್ ಬೋನ್ಸ್ ಆಕ್ಟ್, ಪೇಮೆಂಟ್ ಆಫ್ ವೇಜಸ್ ಆಕ್ಟ್ ಮೆಟರ್ನಿಟಿ ಬೆನಿಫಿಟ್ ಆಕ್ಟ್, ಕರ್ನಾಟಕ ಸೋಪ್ಸ್ ಅಂಡ್ ಕಮರ್ಷಿಯಲ್ ಆಕ್ಟ್, ಈ ಆಕ್ಟ್‌ಗಳನ್ನು ಸೇರಿಸಲಿಕ್ಕೆ ನಾವೂ ಸಹ ಒಪ್ಪಿಕೊಂಡಿದ್ದೇವೆ. ಅದೇ ತರಹ ಕ್ಲಾಸ್ (14) ನಲ್ಲಿ ಸೆಂಟ್ರಲ್ ಆರ್ ಸ್ಟೇಟ್ ಆಕ್ಟ್ ಅದರ ನಂತರ 4i 'ಎ' ಅಂದರೆ ಹಾಝಾರ್ಡ್ಸ್ ಇಂಡಸ್ಟ್ರೀಸ್ ಇದ್ದರೆ ಅದಕ್ಕೆ ಅನುಮತಿ ಕೊಡಬಾರದು ಎಂದು ಇದೆ, ಅದಕ್ಕೂ ನಾವು ಒಪ್ಪಿಕೊಂಡಿದ್ದೇವೆ. ಕ್ಲಾಸ್ (15)ನಲ್ಲಿ ನಾವು ಏನು ಹೇಳಿದ್ದೇವೆಂದರೆ, ಕಂಬೈನ್ಡ್ ಅಪ್ಲಿಕೇಷನ್ ವರ್ಷದಲ್ಲಿ ಒಂದೇ ಸಾರಿ ಕೊಟ್ಟರೆ ಸಾಕು ಎಂದು ಇತ್ತು. ಭಾರತ ಸರ್ಕಾರದವರು ಪ್ರತಿ ವರ್ಷಕ್ಕೊಂದು ಸಾರಿ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ, ಅದನ್ನು ನಾವೂ ಕೂಡ ಒಪ್ಪಿಕೊಂಡಿದ್ದೇವೆ. ಕ್ಲಾಸ್ (16)ರಲ್ಲಿ ಚೀಫ್ ಇನ್ಸ್‌ಪೆಕ್ಟರ್ಸ್ ಆಫ್ ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್‌ನ್ನು ನಾವು ಏನು ನಮೂದು ಮಾಡಿದ್ದೇವೆ, ಅದರ ನಂತರ, ಇನ್ನು ಎರಡು ಇನ್‌ಸ್ಟಿಟ್ಯೂಷನ್ಸ್ ಆ್ಯಡ್ ಮಾಡಿ ಎಂದು ಅವರು ಹೇಳುತ್ತಾರೆ. ಎಂಪ್ಲಾಯೀಸ್ ಸ್ಟೇಟ್ ಇನ್‌ಶ್ಯೂರೆನ್ಸ್ ಕಾರ್ಪೊರೇಷನ್ ಮತ್ತು ಎಂಪ್ಲಾಯೀಸ್ ಪ್ರಾವಿಡೆಂಟ್ ಆಫ್ ಆರ್ಗನೈಸೇಷನ್, ಇವೆರಡೂ ಆ್ಯಡ್ ಮಾಡಿ ಎಂದು ಹೇಳಿದ್ದಾರೆ. ಈ ಮಸೂದೆ ಈಗಾಗಲೇ ಈ ಮನೆಯಲ್ಲಿ ಪಾಸಾಗಿದೆ. ಕೇಂದ್ರ ಸರ್ಕಾರದ ಅನುಮತಿಗೆ ಹೋದಾಗ ಕೇಂದ್ರ ಸರ್ಕಾರ ಕೆಲವು ಸೂಚನೆಗಳನ್ನು ಕೊಟ್ಟಿದೆ. ಆ ಸೂಚನೆಗಳನ್ನು ಒಪ್ಪಿಕೊಂಡು ನಾವು ಜಾರಿಗೆ ತರುತ್ತಿದ್ದೇವೆ. ಇದರಿಂದ ಕೈಗಾರಿಕೆಯಲ್ಲಿ ಪಾರದರ್ಶಕತೆ, ಮತ್ತು ಸರಳೀಕರಣ ತರಲಿಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ ಈಗಾಗಲೇ ಈ ಮನೆ ಇದಕ್ಕೆ ಮಂಜೂರಾತಿ ಕೊಟ್ಟಿದೆ. ಕೇಂದ್ರ ಸರ್ಕಾರ ಏನು ಸೂಚನೆ ಕೊಟ್ಟಿದೆ ಆ ತಿದ್ದುಪಡಿಗೂ ಸಹ ಈ ಮನೆ ಮಂಜೂರಾತಿ ಕೊಡಬೇಕಾಗಿ ಕೋರುತ್ತೇನೆ.

†**ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು)**:–ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಬಿಲ್ ಪಾಸಾಗಿದೆ ಎನ್ನುವ ಮಾತನ್ನು ಹೇಳಿದರು, ಕೆಲವೊಂದು ತಿದ್ದುಪಡಿಗಳನ್ನು ಈ ಬಿಲ್‌ನಲ್ಲಿ ಆ್ಯಡ್ ಮಾಡಬೇಕೆನ್ನುವ ಉದ್ದೇಶದಿಂದ ಈ ಬಿಲ್ಲನ್ನು ತಂದಿದ್ದೇವೆಂದು ಹೇಳಿದರು. ಅದರಲ್ಲಿ ಪ್ರಾವಿಡೆಂಟ್ ಫಂಡ್ ಇವೆಲ್ಲಾ ಹೇಳುತ್ತಿದ್ದರು. ಕರ್ನಾಟಕ ಕೈಗಾರಿಕೆಗಳ ಸೌಲಭ್ಯೀಕರಣ ಬಿಲ್ಲನ್ನು ತೆಗೆದುಕೊಂಡು ಬರುತ್ತಿದ್ದೀರಿ. ಈ ಬಿಲ್ ಪಾಸಾಗಿದೆ ಅದಕ್ಕೆ ಇದನ್ನು ಕೆಲವು ತಿದ್ದುಪಡಿಗಳನ್ನು ಆ್ಯಡ್ ಮಾಡುತ್ತಿದ್ದೀರಿ. ಇದರ ಜೊತೆಗೆ ನಮ್ಮ ಇಂಡಸ್ಟ್ರೀಗಳನ್ನು ಉಳಿಸುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದೀರಿ ಎಂಬುದನ್ನು ಹೇಳಬೇಕು. ಕಾನೂನು, ಬಿಲ್ ಪಾಸ್ ಮಾಡುವುದು ಎಲ್ಲಾ ಆಯಿತು. ಒಂದು ಉದಾಹರಣೆ ಕೊಡುವುದಾದರೆ, ನಾನು ಹಿಂದೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ, ಕೊಕೋ ಕೋಲಾ ಕಂಪನಿಯಲ್ಲಿರುವ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್ ಕೊಡುತ್ತಿಲ್ಲ. ಕ್ಯಾಂಟೀನ್ ಸೌಲಭ್ಯ ಇಲ್ಲ, ಸರಿಯಾದ ಸೆಕ್ಯುರಿಟಿ ಇಲ್ಲ. ಇದು ಕಾರ್ಮಿಕರಿಗೆ ಸಂಬಂಧಪಟ್ಟಿದ್ದು, ವಿಚಾರ ಮಾಡಿ

ಹೇಳುತ್ತೇವೆಂದು ತಾವು ಹೇಳಿದ್ದೀರಿ. ಇದುವರೆವಿಗೂ ಹೇಳಲಿಲ್ಲ. ಕೊಕೋ ಕೋಲಾ ಕಂಪನಿಯವರು ಅಲ್ಲಿರುವಂತಹ ಕಾರ್ಮಿಕರಿಗೆ ಪೂರ್ತಿ ಶೋಷಣೆ ಮಾಡುತ್ತಿದ್ದಾರೆ. ಅವರಿಗೆ ಪ್ರಾವಿಡೆಂಟ್ ಫಂಡ್ ಫೆಸಿಲಿಟಿ ಇಲ್ಲ. ಕ್ಯಾಂಟೀನ್ ಫೆಸಿಲಿಟಿ ಇಲ್ಲ. ಇನ್ನಿತರ ಹಲವು ಸಣ್ಣಪುಟ್ಟ ಫೆಸಿಲಿಟಿಗಳೂ ಅವರಿಗೆ ಇಲ್ಲ. ಕೊಕೋಕೋಲಾ ಕಂಪನಿ ವಿದೇಶಿ ಕಂಪನಿ ಎಂದು ನಾವೆಲ್ಲಾ ಹೇಳಿದೆವು. ಅದಕ್ಕೆ 210 ಕೋಟಿ ರೂಪಾಯಿ ತೆರಿಗೆ ವಿನಾಯಿತಿಯನ್ನೂ ಕೂಡ ಕೊಟ್ಟಿರಿ. ಆದರೆ ನಮ್ಮ ಕರ್ನಾಟಕದ ಕಾರ್ಮಿಕರು ಅಲ್ಲಿ ನೌಕರಿ ಮಾಡುವವರು ಅಲ್ಲಿ ಪೂರ್ತಿ ಶೋಷಣೆಗೊಳಗಾಗಿದ್ದಾರೆ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದು ಹೇಳಬೇಕಾಗುತ್ತದೆ. ಅದರ ಜೊತೆಗೆ ಕೈಗಾರಿಕೆಗಳ ವಿಷಯ ಬಂದಂತಹ ಸಂದರ್ಭದಲ್ಲಿ ನಾನು ಹೇಳುವುದು, ಸಣ್ಣ ಕೈಗಾರಿಕೆಗಳ ಸಬ್ಸಿಡಿ 400 ಕೋಟಿ ರೂಪಾಯಿ ಬಾಕಿ ಇದೆ. ಎರಡು ವರ್ಷಗಳಿಂದ ನಾವು ಇದನ್ನು ಕೇಳುತ್ತಿದ್ದೇವೆ. ಈ ಸಬ್ಸಿಡಿ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಈ ಕೈಗಾರಿಕೆಗಳಿಗೆ ಎಲ್ಲಾ ರೀತಿಯ ಸೌಲಭ್ಯ ಕೊಡಲಿಕ್ಕೆ ಕಾನೂನು ತಂದು ಆಯಿತು, ಆದರೆ 400 ಕೋಟಿ ರೂಪಾಯಿ ಸಬ್ಸಿಡಿ ಏನು ಕೊಡಬೇಕಾಗಿದೆ, ಅದನ್ನು ಯಾವಾಗ ಕೊಡುತ್ತೀರಿ? ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಗಮನ ಹರಿಸಿದ್ದಾರೆ, ಆದಷ್ಟು ಬೇಗನೆ ನಾವು ಈ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಸಣ್ಣ ಕೈಗಾರಿಕಾ ಸಚಿವರು ಹೇಳಿದರು. ಆದರೆ ಇವತ್ತು ಈ ಬಿಲ್ ಚರ್ಚೆ ಮಾಡುವ ಸಂದರ್ಭದಲ್ಲಿ ಸ್ಮಾಲ್ ಸ್ಕೇಲ್ ಸಬ್ಸಿಡಿ ಏನಿದೆ ಅದನ್ನು ಯಾವಾಗ ಕೊಡುತ್ತೀರಿ ಎಂದು ಮಾನ್ಯ ಕೈಗಾರಿಕಾ ಸಚಿವರು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಯು.ಆರ್. ಸಭಾಪತಿ: ಅಧ್ಯಕ್ಷರೆ, ಈ ಬಿಲ್‌ಗೂ ಸಹಾಯಧನಕ್ಕೂ ಏನು ಸಂಬಂಧ? ನಾವು ಬಿಲ್ಲಿನ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಕೈಗಾರಿಕೆಗಳಿಗೆ ಸ್ಕೋಪ್ ಕೊಟ್ಟು ಎನ್‌ಕರೇಜ್‌ಮೆಂಟ್ ಕೊಡಬೇಕು ನೀವು ಅದಕ್ಕೆ ಅಮೆಂಡ್‌ಮೆಂಟ್ ತರುತ್ತಿದ್ದೀರಿ, ಕೈಗಾರಿಕೆಗಳಿಗೆ ಫೆಸಿಲಿಟಿ ಮಾಡುವುದಕ್ಕೆ ತರುತ್ತಿದ್ದೀರಿ. ಅದಕ್ಕೋಸ್ಕರ ಇದನ್ನೆಲ್ಲಾ ಹೇಳಬೇಕಾಗುತ್ತದೆ. ಬರೀ ಕಾನೂನು ತೆಗೆದುಕೊಂಡು ಬಂದರೆ ಏನೂ ಪ್ರಯೋಜನವಿಲ್ಲ. ನಿಜವಾಗಿ ಫೀಲ್ಡ್‌ನಲ್ಲಿ ಏನು ಕೆಲಸ ಆಗುತ್ತಿದೆ ಅದನ್ನು ನೋಡಬೇಕು. ಕೈಗಾರಿಕೆಗಳು ಸತ್ತು ಹೋಗುತ್ತಿವೆ. ಸಣ್ಣ ಪ್ರಮಾಣದ ಕೈಗಾರಿಕೆಗಳು ಎಲ್ಲಾ 60 ಪರ್ಸೆಂಟ್ ಸಿಕ್ ಆಗಿ ಎಲ್ಲಾ ಮುಳುಗುತ್ತಿವೆ. ಅಂತಹ ಕೈಗಾರಿಕೆಗಳನ್ನು ರಿಪೇರಿ ಮಾಡುವುದಕ್ಕೆ ಏನು ಮಾಡುತ್ತೀರಿ? ಸುಮ್ಮನೆ ಬಿಲ್ ತೆಗೆದುಕೊಂಡು ಬಂದು ಪ್ರಯೋಜನ ಏನೆಂದು ನಾನು ಕೇಳುತ್ತಿದ್ದೇನೆ. ಇದರ ಬಗ್ಗೆ ಏನು ಎಂದು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಸಿಂಗಲ್ ವಿಂಡೋ ಎಲ್ಲಾ ಹೇಳುತ್ತೀರಿ. ಹೊಸದಾಗಿ ಯಾರಾದರೂ ಸಕ್ಕರೆ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೆ ಬಂದರೆ, ಅವರಿಗೆ 108 ತೊಂದರೆಗಳನ್ನು ಕೊಡುತ್ತೀರಿ. ಯಾರು ನಿಮ್ಮ ರಾಜಕೀಯ ಹಿತಾಸಕ್ತಿಯವರು ಇರುತ್ತಾರೆ ಅಂತಹವರಿಗೆ ಒಂದೇ ಸಾರಿಗೆ ಕ್ಲೀಯರೆನ್ಸ್ ಇಶ್ಯೂ ಮಾಡುತ್ತೀರಿ. ಆದರೆ ಪ್ರತಿಪಕ್ಷದವರು ಯಾರಾದರೂ ರಾಜಕಾರಣಿಗಳಿದ್ದರೆ, ಅವರು ಏನಾದರೂ ಸಕ್ಕರೆ ಕಾರ್ಖಾನೆ ಪ್ರಾರಂಭ ಮಾಡಲಿಕ್ಕೆ ಅರ್ಜಿ ಕೊಟ್ಟರೆ, ಅವರಿಗೆ 108 ಕಾರಣಗಳನ್ನು ಕೊಟ್ಟು ಆ ಫೈಲ್‌ನ್ನು ಹಿಂದಕ್ಕೆ ಇಡುವ ಕೆಲಸ ಇವತ್ತು ಆಗುತ್ತಿದೆ. ಯಾರು ಇತ್ತೀಚೆಗೆ ಕೊಟ್ಟಿರುತ್ತಾರೆ ಅದು ಕ್ಲೀಯರ್ ಆಗುತ್ತದೆ. ಆದರೆ ಮೊದಲು ಯಾರು ಕೊಟ್ಟಿರುತ್ತಾರೆ ಅವರ ಫೈಲ್ ಕ್ಲೀಯರ್ ಮಾಡುತ್ತಿಲ್ಲ. ಅದರಲ್ಲಿಯೂ ರಾಜಕಾರಣ ಮಾಡುವುದು ನಡೆಯುತ್ತಿದೆ. ಹಾಗಾದರೆ ಸಿಂಗಲ್ ವಿಂಡೋ ಏಜೆನ್ಸಿ, ಉದ್ಯೋಗ ಮಿತ್ರ ಇವೆಲ್ಲಾ ತೆಗೆದುಕೊಂಡು ಏನು ಮಾಡುವುದು? ನೀವು ನಿಜವಾಗಿ ಇವುಗಳಿಗೆಲ್ಲಾ ರಾಜಕೀಯ ಹಿನ್ನಲೆಗಳನ್ನು ನೋಡಬಾರದು.

ಯಾರು ಅಪ್ಲಿಕೇಷನ್ ಹಾಕಿದ್ದಾರೆ, ಅವರ ಕೆಪ್ಯಾಸಿಟಿ ಏನು, ಅವರ ಹಿನ್ನೆಲೆ ಏನಿದೆ, ಅವರ ಇನ್‌ವೆಸ್ಟ್‌ಮೆಂಟ್ ಏನಿದೆ ಎಂದು ನೋಡಿಕೊಂಡು ಕ್ಲೀಯರ್ ಮಾಡಬೇಕು. ಅದನ್ನು ಬಿಟ್ಟು, ನಿಮ್ಮ ಹಿತಾಸಕ್ತಿ ಇರುವವರಿಗೆ ಲೈಸನ್ಸ್ ಇಮ್ಮಿಡಿಯಟ್ಲಿ ಕೊಡುವುದು, ರಾಜಕೀಯ ವಿರೋಧಿ ಇರುವವರಿಗೆ ಅವರ ಫೈಲ್ ಹಿಂದಕ್ಕೆ ಇಟ್ಟು ಬಿಡುವುದು. ಈ ರೀತಿಯಾದ ವ್ಯವಹಾರಗಳು ನಡೆಯುತ್ತಿವೆ. ಇದು ನಿಲ್ಲಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಆ ರೈತರ ಹಿತವನ್ನೂ ಕೂಡ ನೋಡಬೇಕಾಗುತ್ತದೆ. ಆ ಏರಿಯಾದಲ್ಲಿ ಎಷ್ಟು ಗ್ರಾಮಗಳು ಬರುತ್ತವೆ, ಅಲ್ಲಿ ಎಷ್ಟು ಕಬ್ಬು ಬೆಳೆಯುತ್ತಾರೆ, ಅದನ್ನು ನೋಡಿಕೊಂಡು ಅನುಮತಿ ನೀಡಬೇಕಾಗುತ್ತದೆ.

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು): ಸಕ್ಕರೆ ಕಾರ್ಖಾನೆಗಳಿಗೆ ಸರ್ಕಾರ ಮನಸ್ಸಿಗೆ ಬಂದ ಹಾಗೆ ಲೈಸನ್ಸ್ ಕೊಡುತ್ತಾರೆಂದು ಹೇಳುತ್ತೀರಿ, ನಾವು ಆ ರೀತಿ ಕೊಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಕೆಲವು ನಾರ್ಮ್ಸ್ ಇವೆ, ರೂಲ್ಸ್ ಇವೆ, ರೂಲ್ಸ್ ಪ್ರಕಾರ ನೋಡಿಯೇ ಅದನ್ನು ಕೊಡುತ್ತೇವೆಯೇ ಹೊರತು, ಜನರಲ್ಲಾಗಿ ನಾವು ಏನು ರೂಲ್ಸ್ ಮಾಡಿದ್ದೇವೆ, ಅದರ ಪ್ರಕಾರ ನ್ಯಾಯಯುತವಾಗಿ ಯಾವುದನ್ನು ಕೊಡಬಹುದು ಅದನ್ನು ಕೊಡುತ್ತಿದ್ದೇವೆ ಹೊರತು, ಅವರಿಗೆ ಒಂದು ರೀತಿ ಇವರಿಗೆ ಒಂದು ರೀತಿ ಮಾಡುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಬಾಗಲಕೋಟೆ ಜಿಲ್ಲೆಯಲ್ಲಿ ಆ ರೀತಿ ಅನ್ಯಾಯ ವಾಗಿದೆ. ಇದು ಇವತ್ತಿಗೂ ಮುಂದುವರೆದಿದೆ. ಇದನ್ನು ನಾನು ಉದಾಹರಣೆ ಸಹಿತ ಹೇಳಬಲ್ಲೆ. ಇದು ಹಿಂದಿನ ಸದನದಲ್ಲಿಯೂ ಚರ್ಚೆಯಾಗಿದೆ. ಮಾನ್ಯ ದೇಶಪಾಂಡೆಯವರು ಇದನ್ನು ಸರಿ ಮಾಡುತ್ತೇನೆಂದು ಹೇಳಿದ್ದರು. ಇವತ್ತಿನವರೆಗೂ ಸರಿಯಾಗಲಿಲ್ಲ. ಅದು ಹೀಗೇ ಮುಂದುವರೆಯುತ್ತಿದೆ. ಬೇರೆ ಬೇರೆ ರಾಜಕೀಯ ಹಿನ್ನೆಲೆಯಲ್ಲಿ ಈ ರೀತಿ ಇನ್‌ಜಸ್ಟೀಸ್ ಆಗುವಂಥದ್ದು ನಡೆಯುತ್ತಿದೆ. ಆ ದಿಸೆಯಲ್ಲಿಯೂ ಸರ್ಕಾರ ಚಿಂತನೆ ಮಾಡಬೇಕು. ಇದರ ಬಗ್ಗೆ ಇಂಪಾರ್ಷಿಯಲ್ ಆಗಿ ನಡೆದುಕೊಳ್ಳುವ ಹಾಗೆ ಮಾಡಿ ನಂತರ ಬಿಲ್ ತೆಗೆದುಕೊಂಡು ಬಂದರೆ ಉಪಯುಕ್ತವಾಗುತ್ತದೆ. ಭದ್ರಾವತಿಯಲ್ಲಿ ಎಂಪಿಎಮ್ ಸಕ್ಕರೆ ಕಾರ್ಖಾನೆ ಮತ್ತು ಪೇಪರ್ ಮಿಲ್ಸ್ ಇದೆ. ಅಲ್ಲಿ ನಮ್ಮ ಮಾನ್ಯ ಕುಟಿನೋ ಬೆಳಗಾಂ ಡಿವಿಷನಲ್ ಕಮಿಷನರ್ ಆಗಿದ್ದವರು, ಒಬ್ಬ ಒಳ್ಳೆಯ ಅಧಿಕಾರಿ, ಅವರನ್ನು ನೀವು ಎಂಪಿಎಮ್ ಸಿಎಂಡಿಯಾಗಿ ಮಾಡಿದ್ದೀರಿ. ಅವರು ಬಂದ ಮೇಲೆ ಹಿಂದಿನ ಲಾಸ್ ಎಲ್ಲಾ ಕಡಿಮೆಯಾಗಿ 10 ಕೋಟಿ 20 ಕೋಟಿ ರೂಪಾಯಿ ಲಾಸ್ ಇದ್ದುದ್ದು ಕಡಿಮೆಯಾಗಿ ಲಾಭದಾಯಕವಾಗಿ ನಡೆಸಿಕೊಂಡು ಬಂದಿದ್ದಾರೆ. ಒಬ್ಬ ಪ್ರಾಮಾಣಿಕ ದಕ್ಷ ಅಧಿಕಾರಿ ಇದ್ದರೆ, ಲಾಸ್‌ನಲ್ಲಿ ಇದ್ದ ಗವರ್ನಮೆಂಟ್ ಓನ್ಡ್ ಫ್ಯಾಕ್ಟರಿ ಸಹ ಲಾಭದಲ್ಲಿ ಬಂದರೆ ಅದಕ್ಕೆ ಅವರಿಗೆ ಎನ್‌ಕರೇಜ್ ಮಾಡಬೇಕು. ಇವತ್ತು ವದಂತಿ ಏನಿದೆ ಎಂದರೆ, ಶ್ರೀ ಕುಟಿನೊವ್ ಅವರನ್ನು ಸಿಎಂಡಿ ಪೋಸ್ಟ್‌ನಿಂದ ತೆಗೆದು ಒಬ್ಬ ರಾಜಕೀಯ ವ್ಯಕ್ತಿಯನ್ನು ನೀವು ಪೋಸ್ಟಿಂಗ್ ಮಾಡುತ್ತಿದ್ದೀರಿ ಎನ್ನುವ ವದಂತಿಗಳು ಸಾಕಷ್ಟು ಇವೆ. ನಾನು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಕೂಡ ಬರೆದಿದ್ದೇನೆ. ದಯವಿಟ್ಟು ಸಿ.ಎಂ.ಡಿ. ಶ್ರೀ ಕುಟಿನೊವ್ ಅವರನ್ನು ಬದಲಾವಣೆ ಮಾಡಬೇಡಿ, ಎಂಪಿಎಂ ಪೇಪರ್ ಮಿಲ್ ಮತ್ತು ಶುಗರ್ ಫ್ಯಾಕ್ಟರಿಯನ್ನು ಉಳಿಸಬೇಕು, ಅವರಿಗೆ ಬದಲಾವಣೆ ಮಾಡಬೇಡಿ ಎಂದು ಪತ್ರ ಬರೆದರೂ ಮಾನ್ಯ ಮುಖ್ಯಮಂತ್ರಿಗಳಿಂದ ಏನೂ ರೆಸ್‌ಪಾನ್ಸ್ ಬರಲಿಲ್ಲ. ಈ ಸದನ ಮುಗಿಯುವುದರೊಳಗಾಗಿ ಅವರನ್ನು ಬದಲಾವಣೆ ಮಾಡಬಹುದು ಎಂದು ನನಗನ್ನಿಸುತ್ತದೆ. ಈ ರೀತಿಯ ದಕ್ಷರಾದ ಅಧಿಕಾರಿಗಳನ್ನು ಅಲ್ಲಿ ಮುಂದುವರೆಸಿ, ಪ್ರಾಫಿಟ್‌ನಲ್ಲಿ ಬಂದದ್ದನ್ನು ಇನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಯಾವುದೇ

ಯೂನಿಯನ್ ಕಾರ್ಮಿಕರು ಮ್ಯಾನೇಜ್‌ಮೆಂಟ್ ವಿರುದ್ಧ ಇರುತ್ತಾರೆ. ಯೂನಿಯನ್‌ದವರು ಬಂದು ಒಳ್ಳೆಯ ಥೇರ್ಮನ್ ಮಾಡಿದ್ದೀರಿ, ಅವರಿಗೆ ಬದಲಾವಣೆ ಮಾಡಬೇಡಿ ಎಂದು ಅವರು ಹೇಳುತ್ತಿದ್ದಾರೆ. ರಾಜಕೀಯ ವ್ಯಕ್ತಿಯನ್ನು ಥೇರ್ಮನ್ ಆಗಿ ನೇಮಕ ಮಾಡುತ್ತೀರಿ ಎಂಬ ವದಂತಿ ಇದೆ, ಮತ್ತು ಅಲ್ಲಿರುವಂತಹ ಅಧಿಕಾರಿಗಳನ್ನು ಬದಲಾವಣೆ ಮಾಡುವುದು ನಡೆಯುತ್ತಿದೆ. ಅದು ಆ ರೀತಿ ಆಗಬಾರದು, ಮಾನ್ಯ ಮುಖ್ಯಮಂತ್ರಿಗಳ ಮೇಲೆ ನೀವೂ ಒತ್ತಡ ತರಬೇಕಾಗುತ್ತದೆ, ಸರ್ಕಾರಿ ಸ್ವಾಮ್ಯದ ಆ ಕಾರ್ಖಾನೆ ಉಳಿಯುವ ಹಾಗೆ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇದರ ಬಗ್ಗೆಯೂ ಸರ್ಕಾರದ ಸ್ಪಷ್ಟನೆ ಮಾಡಬೇಕೆಂದು ಹೇಳಿ, ಇಂತಹವಕ್ಕೆಲ್ಲಾ ನೀವು ಲಕ್ಷ್ಯ ಕೊಟ್ಟರೆ, ಈ ಬಿಲ್ ತಂದು ಅದಕ್ಕೆ ಪೂರಕವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇದು ಸುಮ್ಮನೆ ಇಲ್ಲಿ ಕಾಗದದಲ್ಲಿ ಮಾತ್ರ ಸದನದಲ್ಲಿ ಬಿಲ್ ಪಾಸಾಗುತ್ತದೆ, ಅಲ್ಲಿ ಕೋಕೋ ಕೋಲ ಕಂಪನಿ ಕಾರ್ಮಿಕರು ಶೋಷಣೆಗೊಳಗಾಗುತ್ತಾರೆ, ಮುಂದೆ ಆ ಬಿಲ್ ತಂದೂ ಏನೂ ಪ್ರಯೋಜನ ಇಲ್ಲ. ಅದರ ಬಗ್ಗೆ ಚಿಂತನೆ ಆದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

†ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿಯೇ ನಾವು ಈ ಬಿಲ್‌ನ್ನು ಇಲ್ಲಿಂದ ಪಾಸ್ ಮಾಡಿ ಕಳುಹಿಸಿಕೊಟ್ಟಿದ್ದೆವು. ಈಗ ಆ ಬಿಲ್ ಮೇಲೆ ಕೆಲವು ಅಬ್ಸರ್ವೇಶನ್ಸ್ ಮಾಡಿ ಇಲ್ಲಿಗೇ ಕಳುಹಿಸಿಕೊಟ್ಟಿದ್ದಾರೆ. ಅಂದರೆ ಏನೋ ಸ್ವಲ್ಪ ಸೀರಿಯಸ್ ಲ್ಯಾಕುನಾ ಇದೆ ಎಂದು ನನಗನ್ನಿಸುತ್ತಿದೆ. ಆದರೆ ಈ ಬಿಲ್‌ನಲ್ಲಿ ಏನು ತೋರಿಸುತ್ತಿದೆಯೆಂದರೆ You have concentrated only on how you should encourage the investors. ಇದೊಂದನ್ನು ನೀವು ಗಮನದಲ್ಲಿಟ್ಟುಕೊಂಡಿದ್ದೇರೆಯೇ ಹೊರತು ಇದಕ್ಕೆ ಪೂರಕವಾದಂಥ ಎಂಪ್ಲಾಯೀಸ್ ಇಂಟರೆಸ್ಟ್, ಕಚ್ಚಾ ಸಾಮಗ್ರಿಗಳನ್ನು ಸಪ್ಲೈ ಮಾಡತಕ್ಕಂಥವರ ಬಗ್ಗೆ, ಅಂದರೆ ಸ್ಥಳೀಯವಾಗಿ ಕಚ್ಚಾ ಸಾಮಗ್ರಿಗಳನ್ನು ಸರಬರಾಜು ಮಾಡುವವರ ಬಗ್ಗೆ, ಇವುಗಳ ಬಗ್ಗೆ ನೀವು ಚಕಾರ ಎತ್ತಲೇ ಇಲ್ಲ. ಇಲ್ಲಿ ತಾವು ಎನು ಮಾಡಿದ್ದೀರೆಂದರೆ ಉದ್ದಿಮೆದಾರರು ಉದ್ದಿಮೆ ತೆರೆಯಲು ಇರುವ ಪ್ರೊಸಿಜರ್‌ಗಳನ್ನು ಎಷ್ಟರಮಟ್ಟಿಗೆ ಸಿಂಪ್ಲಿಫೈ ಮಾಡಬಹುದು ಎನ್ನತಕ್ಕಂಥದ್ದು, ಸಿಂಗಲ್ ವಿಂಡೋ ಏಜೆನ್ಸಿ ಮಾಡತಕ್ಕಂಥದ್ದು, ಮತ್ತು ಎಲ್ಲಾ ಪ್ರೊಸೀಜರ್‌ಗಳನ್ನು ಡಿಸ್‌ಪೆನ್ಸ್ ಮಾಡಿ ಉದ್ದಿಮೆದಾರರಿಗೆ ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಬೇಕು ಎಂದು ಈ ಬಿಲ್‌ನಲ್ಲಿ ಮಾಡಿಕೊಂಡಿದ್ದೀರಿಯೇ ಹೊರತು ಬೇರೆನಿಲ್ಲ. ಉದಾಹರಣೆಗೆ ಹೇಳಬೇಕು ಎಂದರೆ ಕೋಕೋಕೋಲಾ ಮತ್ತು ಬೇರೆ ಬೇರೆ ಸಾಫ್ಟ್ ಡ್ರಿಂಕ್ಸ್ ಕಂಪನಿಗಳವರು ಇದರ ತಯಾರಿಕೆಗೆ ಬೇಕಾದಂಥ ಸಕ್ಕರೆಯನ್ನು ಇಲ್ಲಿನವರಿಂದ ತೆಗೆದುಕೊಳ್ಳುವುದಿಲ್ಲ. ಬೇರೆ ಕಡೆ ಎಲ್ಲಿಂದಲೋ ತರಿಸಿಕೊಳ್ಳುತ್ತಾರೆ. ನಮ್ಮಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ಉತ್ಪತ್ತಿಯಾದ ಸಕ್ಕರೆಯನ್ನು ಅವರು ತೆಗೆದುಕೊಳ್ಳುತ್ತಿಲ್ಲ. ಬೇರೆ ಕಡೆ ಎಲ್ಲಿಂದಲೋ ತರುತ್ತಾರೆ. ಇದಲ್ಲದೆ ಬೇರೆ ಸಣ್ಣ ಪುಟ್ಟ ಕಚ್ಚಾ ಸಾಮಗ್ರಿಗಳು ಏನಿವೆ ಅವುಗಳನ್ನೂ ಕೂಡ ಬೇರೆ ಕಡೆ ಎಲ್ಲಿಂದಲೋ ತರುತ್ತಾರೆ. ಇಲ್ಲಿ ಸ್ಥಳೀಯವಾಗಿ ಉತ್ಪತ್ತಿ ಮಾಡುವವರಿಗೆ ಅವಕಾಶವೇ ಇಲ್ಲವಾಗಿದೆ. ಅದರ ಬಗ್ಗೆ ನೀವು ಏನೂ ಚಕಾರವೆತ್ತಿಲ್ಲ. ಇದು ಒಂದು ವಿಚಾರ. ಇನ್ನು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಯಾವುದೇ ನೌಕರ ವರ್ಗದವರಿಗೆ ಅನ್ಯಾಯವಾದರೆ, ಅವರಿಗೆ ರಿಟ್ರೆಂಚ್ ಮಾಡಿದರೆ ಅವರಿಗೆ ಬೇರೆ ಸವಲತ್ತುಗಳನ್ನು ಕೊಡತಕ್ಕಂಥದ್ದು, ನೀವು ಕೇವಲ ಖಾಸಗಿಯವರಿಗೆ ಕಾರ್ಖಾನೆ ಸ್ಥಾಪನೆ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ. ನಾನು ಕಳೆದ ಅಧಿವೇಶನದಲ್ಲೂ ಈ ಬಗ್ಗೆ ಹೇಳಿದ್ದೆ, ಈಗಲೂ ಕೂಡ ಹೇಳುತ್ತಿದ್ದೇನೆ. ಇಲ್ಲಿ ರಿಸರ್ವೇಶನ್‌ನ್ನು ಮಾಡತಕ್ಕಂಥದ್ದಕ್ಕೆ

ಈ ಗ್ಲೋಬಲೈಸೇಶನ್, ಪ್ರೈವೇಟೈಸೇಶನ್ ಎಂದು ಮಾಡಿ, ಈಗಿರತಕ್ಕಂಥ ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ ಕಂಪನಿಗಳನ್ನು ಒಂದು ಕಡೆ ಮುಚ್ಚುತ್ತಿರುವುದು. ಇನ್ನೊಂದು ಕಡೆ ಪ್ರೈವೇಟಾಗಿ ತೆಗೆಯುತ್ತಾ ಇರತಕ್ಕಂಥದ್ದು ಆಗಿ ಇರುವ ಒಂದು ಎಲ್ಲಾ ಮೀಸಲಾತಿಗಳನ್ನು ಅಲ್ಲಿ ತೆಗೆದು ಹಾಕುತ್ತಿರುವುದು ನಡೆಯುತ್ತಿರುವುದರಿಂದ ಇಂದು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಬೀದಿಪಾಲಾಗಿದ್ದಾರೆ. ಅದಕ್ಕೋಸ್ಕರ ಕೇಂದ್ರ ಸರ್ಕಾರದಲ್ಲೂ ಈ ಬಗ್ಗೆ ಆಲೋಚನೆ ಮಾಡಿದ್ದಾರೆ ಮತ್ತು ಹೋರಾಟಗಳೂ ನಡೆಯುತ್ತಿವೆ. ಇನ್ನು ಮುಂದೆ ಹೊಸ ಯೂನಿಟ್‌ಗಳನ್ನು ಯಾರು ಪ್ರಾರಂಭ ಮಾಡುತ್ತಾರೋ ಅಂಥವರು ಮೀಸಲಾತಿಯನ್ನು ಸಂವಿಧಾನಾತ್ಮಕವಾಗಿ ಈ ಖಾಸಗಿ ಕ್ಷೇತ್ರದಲ್ಲೂ ಒದಗಿಸಿಕೊಡಬೇಕು ಎನ್ನತಕ್ಕಂಥದ್ದರ ಬಗ್ಗೆ ತಾವು ಯೋಚನೆ ಮಾಡಿಲ್ಲ. ಕಳೆದ ಬಾರಿಯೂ ಈ ಬಗ್ಗೆ ನಾನು ಹೇಳಿದ್ದೆ. ಇನ್ನು ಸರೋಜಿನಿ ಮಹಿಷಿ ವರದಿ ಆಧಾರದ ಮೇಲೆ ಯಾರೂ ಕೂಡ ನೇಮಕಾತಿಯನ್ನು ಮಾಡುತ್ತಿಲ್ಲ. ನಿಮ್ಮ ಇನ್ಸ್‌ಪೆಕ್ಟರ್ಸ್ ಹೋಗುತ್ತಾರೆ, ಜಾಯಿಂಟ್ ಡೈರಕ್ಟರ್ ಹೋಗಿ ಸರಿ ಇದೆ ಎಲ್ಲಾ ಎಂದು ಬರೆದುಕೊಂಡು ಬರುತ್ತಾರೆ. ಕೇವಲ ಖಾಸಗಿಯವರಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಎಲ್ಲಾ ಕೆಲಸಗಳು ಇವೊತ್ತು ಆಗುತ್ತಿದೆಯೇ ಹೊರತು ಅವರನ್ನು ನಿಯಂತ್ರಣ ಮಾಡುವುದಕ್ಕೆ ಬಿಗಿಯಾದ ಕಾನೂನುಗಳನ್ನು ನೀವು ಮಾಡುತ್ತಿಲ್ಲ. ಅದರ ಬಗ್ಗೆ ತಾವು ಸ್ವಲ್ಪ ಇನ್‌ಸರ್ಟ್ ಮಾಡಿದ್ದರೆ ಒಳ್ಳೆಯದ್ದಿತ್ತು ಎಂದು ನಾನು ಹೇಳುತ್ತಿದ್ದೇನೆ. ಅದಕ್ಕೇ ನಾನು ಹೇಳುವುದೇನೆಂದರೆ ಈ ಬಿಲ್ ಜೊತೆಗೆ ಇವೆಲ್ಲಾ ವಿಚಾರಗಳನ್ನು ತಾವು ತೆಗೆದುಕೊಂಡು ಮತ್ತೆ ರಿವೈಸ್ಡ್ ಬಿಲ್ ತರುವುದು ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಈ ಬಿಲ್‌ನ್ನು ಹಿಂದೆ ಪಾಸ್ ಮಾಡಿ ಕಳುಹಿಸಿರುವುದಕ್ಕೆ ಅದರ ಮೇಲೆ ಕೆಲವು ಅಬ್ಸರ್ವೇಶನ್ಸ್‌ಗಳನ್ನು ಮಾಡಿ ಪುನಃ ಇಲ್ಲಿಗೆ ಕಳುಹಿಸಿದ್ದಾರೆ. ಅಂದರೆ ಸರ್ಕಾರ ಎಂಪ್ಲಾಯರ್ಸ್ ಇಂಟರೆಸ್ಟ್‌ನ್ನು ಪ್ರೊಟೆಕ್ಟ್ ಮಾಡುವ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿತ್ತು. ರಾಷ್ಟ್ರಪತಿಗಳ ಕಛೇರಿಯಲ್ಲಿ ಇದರ ಬಗ್ಗೆ ಸ್ವಲ್ಪ ವಿವರಣೆಯನ್ನು ನೋಡಿ ಎಂಪ್ಲಾಯೀಸ್ ಇಂಟರೆಸ್ಟ್‌ನ್ನು ಪ್ರೊಟೆಕ್ಟ್ ಮಾಡುವುದಕ್ಕೆ ಸ್ಟ್ಯಾಚ್ಯುಟರಿ ರಿಕ್ವೈರ್‌ಮೆಂಟ್ಸ್ ಏನೇನಿದೆ ಅದನ್ನೆಲ್ಲಾ ಇನ್‌ಕ್ಲೂಡ್ ಮಾಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಸ್ಟೇಟ್ ಇನ್‌ಶ್ಯೂರೆನ್ಸ್ ವಿಚಾರಕ್ಕೆ ಸಂಬಂಧಪಟ್ಟ ಹಾಗೆ, ಬಾಯ್ಲರ್ ಇನ್ಸ್‌ಪೆಕ್ಟರ್‌ದ್ದಾಗಲಿ, ಇವೆಲ್ಲವನ್ನು ಬಿಲ್‌ನಲ್ಲಿ ಹಾಕುವಂಥದ್ದರ ಬಗ್ಗೆ ಹೇಳಿದ್ದಾರೆ. ಇದರ ಜೊತೆ ಮಾನ್ಯ ಸಚಿವರಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳುವುದೇನೆಂದರೆ ಇಲ್ಲಿಯವರೆಗೆ ಎಷ್ಟು ಉದ್ದಿಮೆಗಳು ರಾಜ್ಯಕ್ಕೆ ಬಂದಿದೆ? ಆ ರೀತಿ ಬರುವಾಗ time taken to clear the file! and time taken to implement the project. ಅದನ್ನು ನೋಡಿದರೆ ಏನು ಗೊತ್ತಾಗುತ್ತದೆಂದರೆ ಪ್ರಾಜೆಕ್ಟ್ ಇಂಪ್ಲಿಮೆಂಟ್ ಮಾಡುವುದಕ್ಕೆ ಆರು ತಿಂಗಳು, ಒಂದು ವರ್ಷ ಎಂದು ಇದ್ದರೆ ಪೇಪರ್ಸ್ ಕ್ಲಿಯರ್ ಆಗಿ ಅವರಿಗೆ ಫೈನಲ್ ತೀರ್ಮಾನ ಕೊಡುವುದಕ್ಕೆ ಐದಾರು ವರ್ಷ, ಏಳು ವರ್ಷಗಳವರೆಗೆ ಸಮಯ ತೆಗೆದುಕೊಂಡಿರುವಂಥ ಉದಾಹರಣೆಗಳು ಸರ್ಕಾರದ ಮುಂದೆ ಇದೆ. ಮಾನ್ಯ ಸಚಿವರು ಇದರ ಬಗ್ಗೆ ಹೇಳಬೇಕು. ಏಕೆಂದರೆ ನಮಗೇ ಕೆಲವು ಪ್ರಕರಣಗಳ ಬಗ್ಗೆ ಗೊತ್ತಿದೆ. ಅದರ ಬಗ್ಗೆ ಈಗ ಚರ್ಚೆ ಬೇಡ. ಆದರೆ ಅಂಥದ್ದು ಇಲ್ಲ ಎಂದರೆ ಸಚಿವರಾದ ತಾವು ಹೇಳಿಕೆಯನ್ನು ಮಾಡಿದರೆ ಆ ಬಗ್ಗೆ ನಾನು ಬೇಕಾದರೆ ನಿಮಗೆ ಮಾಹಿತಿಯನ್ನು ಕೊಡುತ್ತೇನೆ. ಅದಕ್ಕೋಸ್ಕರ ಈ ಫೆಸಿಲಿಟೇಶನ್ ಬಗ್ಗೆ ಹೇಳುವುದಾದರೆ, ಒಂದು ಕಡೆಯಲ್ಲಿ ಕೆಲವರಿಗೆ

ಮಾತ್ರ ಶೀಘ್ರದಲ್ಲಿ ಕಡತಗಳು ವಿಲೇವಾರಿಯಾಗಿ ಬೇಗ ತೀರ್ಮಾನ ಸಿಕ್ಕುವಂಥದ್ದು, ಕೆಲವರದು ಅತಿ ತಡವಾಗುವಂಥದ್ದು ನಡೆಯುತ್ತಿದೆ. ಈ ರೀತಿಯ ವ್ಯತ್ಯಾಸವನ್ನು ಹೋಗಲಾಡಿಸಬೇಕು. ಸಿಂಗಲ್ ವಿಂಡೋ ಎಂದಕೂಡಲೇ ಎಲ್ಲರಿಗೂ ಒಂದೇ ರೀತಿಯಲ್ಲಿ ಇರಬೇಕಾಗುತ್ತದೆ. ಎಲ್ಲರ ಕಡತಗಳು ತಕ್ಷಣ ಹೋಗಿ ಒಂದು ತಿಂಗಳೋ, ಎರಡು ತಿಂಗಳೋ ಅಥವಾ ಆರು ತಿಂಗಳೋ ಎಂದು ನೀವು ಪ್ರಾರಂಭಿಕವಾಗಿಯೇ ಏನು ಸಮಯದ ಬಗ್ಗೆ ಅವರು ಕಡತವನ್ನು ಮಂಡಿಸಿದಾಗಲೇ ಇಂತಿಷ್ಟು ದಿವಸಗಳಲ್ಲಿ ಕ್ಲಿಯರ್ ಆಗುತ್ತದೆ ಎಂದು ಏನು ಹೇಳುತ್ತೀರೋ ಆ ಸಮಯದೊಳಗೆ ಕ್ಲಿಯರ್ ಆಗಿ ಕಡತ ಅವರ ಬಳಿಗೇ ನೇರವಾಗಿ ಬರಬೇಕೇ ಹೊರತು ಅವರೇ ಮತ್ತೊಮ್ಮೆ ಕಡತವನ್ನು ಹುಡುಕಿಕೊಂಡು ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಬಾರದು. ಆ ಬಗ್ಗೆ ಮಾನ್ಯ ಸಚಿವರು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

†ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು):– ಮಾನ್ಯ ಅಧ್ಯಕ್ಷರೆ, ಹಿಂದೆ ಈ ಬಿಲ್‌ನ್ನು ಪಾಸ್ ಮಾಡಿ ಕಳುಹಿಸುವಂಥ ಸಂದರ್ಭದಲ್ಲಿಯೂ ಕೂಡ ಭಾರಿ ಚರ್ಚೆಗಳು ನಡೆಯಲಿಲ್ಲ. ಸ್ವಲ್ಪ ಗಡಿಬಿಡಿಯಲ್ಲಿ ಅದಷ್ಟು ಶೀಘ್ರದಲ್ಲಿ ಇದನ್ನು ಪಾಸ್ ಮಾಡಿಸಬೇಕು ಎನ್ನುವ ದೃಷ್ಟಿಯಿಂದಲೇ ಈ ಸದನದಲ್ಲಿ ಶೀಘ್ರವಾಗಿ ಪಾಸ್ ಮಾಡಿ ಈ ಬಿಲ್‌ನ್ನು ಕಳುಹಿಸುವಂಥ ವ್ಯವಸ್ಥೆಯಾಗಿದೆ ಎಂದು ನನಗೆ ತಿಳಿದಂಥದ್ದು. ಈಗ ಇದರಲ್ಲಿ ಹೊಸ ಬೇರೆ ಬೇರೆ ಆಕ್ಟ್‌ಗಳು ಇನ್‌ಕ್ಲೂಡ್ ಆಗಬೇಕೆಂದು ಹೇಳಲಾಗಿದೆ. ಹಿಂದಿನ ದಿನಗಳಲ್ಲಿಯೇ ಸಾಧಕ ಬಾಧಕಗಳನ್ನು ನೋಡಿಕೊಂಡು ಈ ಆಕ್ಟ್‌ಗಳನ್ನು ಇನ್‌ಕ್ಲೂಡ್ ಮಾಡಬೇಕು ಎಂದು ತಮ್ಮ ಮನಸ್ಸಿನಲ್ಲಿ ಏಕೆ ಈ ವಿಚಾರಗಳು ಬರಲಿಲ್ಲ? ಇವೊತ್ತು ಕೇಂದ್ರ ಸರ್ಕಾರ ಹೇಳಿತು ಎಂದು ಹೇಳಿ ತಕ್ಷಣದಲ್ಲಿ ಈ ಬಿಲ್ ಪಾಸ್ ಆಗಬೇಕು ಎಂದು ಇದರಲ್ಲಿ ಈ ಆಕ್ಟ್‌ಗಳನ್ನು ಇನ್‌ಕ್ಲೂಡ್ ಮಾಡುತ್ತಿದ್ದೀರಾ? ನಾನು ಹೇಳುವಂಥದ್ದು, ಈಗ ಮಾನ್ಯ ಸೋಮಶೇಖರ್ ಹೇಳಿದ ರೀತಿಯಲ್ಲಿ ಏನಾಗಿದೆ ಎಂದರೆ ಬಂಡವಾಳ ಹೂಡಿಕೆದಾರರ ಬಗ್ಗೆ ಮಾತ್ರ ಸರ್ಕಾರದ ಗಮನ ಹರಿಯುತ್ತಿದೆ. ಒಳ್ಳೆಯದು, ನಮ್ಮ ರಾಜ್ಯಕ್ಕೆ ಬಂಡವಾಳ ಬರಬೇಕು, ಏಕೆಂದರೆ ರಿಸೋರ್ಸ್ ಮೊಬಿಲೈಸ್ ಆಗುವಂಥ ಸಂದರ್ಭದಲ್ಲಿ ಬಂಡವಾಳ ಹೂಡಿಕೆ ಆಗಬೇಕು ಎಂದು ಏನು ಹೇಳಲಾಗುತ್ತದೆ. ಅದಕ್ಕೆ I do agree. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ ದುಡಿಯುವ ಕೈಗಳ ಬಗ್ಗೆ ತಾವು ಏಕೆ ಸೀರಿಯಸ್ ಆಗಿ ಗಮನ ಹರಿಸುತ್ತಿಲ್ಲ? ಏಕೆಂದರೆ ಕೇಂದ್ರ ಸರ್ಕಾರ ಈ ಬಿಲ್‌ನ್ನು ವಾಪಸ್ಸು ಕಳುಹಿಸಿ ಈ ಎಲ್ಲಾ ಆಕ್ಟ್‌ಗಳನ್ನು ಇನ್‌ಕ್ಲೂಡ್ ಮಾಡಲು ತೋರಿಸಿಕೊಟ್ಟಿದ್ದು ಏಕೆಂದರೆ ಯಾರು ದುಡಿಯುವ ಕೈಗಳು ಇದ್ದಾರೆಯೋ ಅವರಿಗೆ ರಕ್ಷಣೆ ಕೊಡುವಂಥ ಪ್ರಯತ್ನಗಳು ಈ ರಾಜ್ಯ ಸರ್ಕಾರದಿಂದ ಆಗುತ್ತಿಲ್ಲ. ಈ ರಾಜ್ಯ ಸರ್ಕಾರ ಅವರನ್ನು ನೆಗ್ಲೆಕ್ಟ್ ಮಾಡುತ್ತಿದೆ. ಬಂಡವಾಳ ಹೂಡಿಕೆದಾರರ ಬಗ್ಗೆ ಮಾತ್ರ ನಿಮ್ಮ ಮನಸ್ಸುಗಳು ಹೋಗುತ್ತಿದೆ ಎಂದು ಹೇಳುವಂಥದ್ದನ್ನು ಕೇಂದ್ರ ಸರ್ಕಾರದವರು ಹೇಳಿದ್ದಾರೆ. ಆದಕಾರಣ ಈ ಆಕ್ಟ್‌ಗಳನ್ನು ಇನ್‌ಕ್ಲೂಡ್ ಮಾಡುವುದರಿಂದಾಗಿ ಇದರ ಸಾಧಕ ಬಾಧಕಗಳೇನು? ಇದರಿಂದಾಗಿ ಇಲ್ಲಿಗೆ ಬರುವಂಥ ಬಂಡವಾಳ ಹೂಡಿಕೆ ವ್ಯಾಪಕವಾಗಿ ಬಂದಾಗ ಮತ್ತು ಇದರಿಂದಾಗಿ ದುಡಿಯುವ ಕೈಗಳಾದ ಕಾರ್ಮಿಕರಿಗೆ ಯಾವ ರೀತಿಯಾಗಿ ಸಹಾಯವಾಗುತ್ತದೆ ಎನ್ನುವ ಬಗ್ಗೆ ತಾವು ಹೇಳಬೇಕಾಗುತ್ತದೆ. ಏಕೆಂದರೆ ಇದು ದೀರ್ಘವಾಗಿ ಚರ್ಚೆಯಾಗಬೇಕಾದಂಥ ಅಂಶ. ಏಕೆಂದರೆ ಒಂದೆರಡು ಕೋಟಿ ಅಲ್ಲ, ಹಲವಾರು ಕೋಟಿಗಟ್ಟಲೆ ಹಣ ಹರಿದು ಬರುವಂಥದ್ದು. ಆ ರೀತಿ ಹರಿದು ಬರುವಂಥ ದುಡ್ಡು ದುಡಿಯುವ ಕೈಗಳ ಮೇಲೆ ಪ್ರಹಾರ ಆಗುವಂಥ ರೀತಿಯಲ್ಲಿ ವಿನಿಯೋಗ ಆದರೆ ಅದು

ಸರಿಯಲ್ಲ. ವಿಶೇಷವಾಗಿ ಈ ಬಿಲ್‌ನಲ್ಲಿ ರಿಸರ್ವೇಶನ್ ಇರಬಹುದು. ಸ್ಟೇಟ್ ಇನ್‌ಶ್ಯೂರೆನ್ಸ್ ಇರಬಹುದು, ಹೀಗೆ ಇವೆಲ್ಲವನ್ನೂ ಕೂಡ ಇನ್‌ಕ್ಲೂಡ್ ಮಾಡಬೇಕಾಗಿದೆ. ಆದಕಾರಣ ಈ ಎಲ್ಲಾ ಆಕ್ಟ್‌ಗಳನ್ನು ಇನ್‌ಕ್ಲೂಡ್ ಮಾಡುವುದರಿಂದ ಹಿಂದಿಗಿಂತ ಹೆಚ್ಚಾಗಿ ಈ ಬಿಲ್ ಯಾವ ರೀತಿಯಲ್ಲಿ ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಸಚಿವರು ಸದನಕ್ಕೆ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್‌ಭಟ್(ಮಂಗಳೂರು):–ಮಾನ್ಯ ಅಧ್ಯಕ್ಷರೆ, ಈ ಬಿಲ್‌ನಲ್ಲಿ ವಿಶೇಷವಾಗಿ ಏಕ ಗವಾಕ್ಷಿ ಬಗ್ಗೆ ಪ್ರಸ್ತಾಪವಾಗಿದೆ. ನಾನು ಕಳೆದ ಬಾರಿ ಚರ್ಚೆ ಸಂದರ್ಭದಲ್ಲಿಯೂ ಕೂಡ ಉಲ್ಲೇಖ ಮಾಡಿದ್ದೆ. ಯಾವುದೇ ಒಂದು ಇಂಡಸ್ಟ್ರಿಯನ್ನು ಆರಂಭಿಸುವುದಕ್ಕೆ ಈ ಏಕ ಗವಾಕ್ಷಿ ಒಂದರಲ್ಲಿಯೇ ಮಾತ್ರಲ್ಲ, ಇವೊತ್ತು ನಮ್ಮ ಜಿಲ್ಲೆಯಲ್ಲಿರುವಂಥ ಕೈಗಾರಿಕೆಗಳು, ಅದರಲ್ಲಿಯೂ ಕೂಡ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳ ಅಸೋಸಿಯೇಶನ್‌ನಲ್ಲಿ ಹಾಗೂ ಬೇರೆ ಬೇರೆ ಕಡೆ ಚರ್ಚೆ ನಡೆದಂಥ ಸಂದರ್ಭದಲ್ಲಿ ಇವೊತ್ತು ನಷ್ಟದಲ್ಲಿರುವಂಥ ಕೈಗಾರಿಕೆಗಳು ಯಾವುದಿವೆ ಅವುಗಳೂ ಕೂಡ ಈ ಕ್ಲಬ್‌ನಿಂದ ಹೊರಬರಬೇಕು ಎಂದರೆ ಇಲ್ಲಿಯೂ ಕೂಡ ಒಂದು ಏಕ ಗವಾಕ್ಷಿ ಯೋಜನೆಯನ್ನು ತರುವಂಥದ್ದು ತುಂಬಾ ಅವಶ್ಯಕತೆ ಇದೆ ಎಂದು ಹೇಳುತ್ತೇನೆ. ಸುಮಾರು 28ರಿಂದ 30, ಹೆಚ್ಚುಕಡಿಮೆ ಅಷ್ಟೂ ಏಜೆನ್ಸಿಗಳ ಮೂಲಕ, ಅಷ್ಟೂ ಸರ್ಕಾರದ ವಿವಿಧ ಇಲಾಖೆಗಳ ಮೂಲಕ ತಪಾಸಣೆಗಳು ನಡೆಯುತ್ತವೆ. ಅಂಥ ಸಂದರ್ಭದಲ್ಲಿ ಎಲ್ಲಾ ಇಲಾಖೆಗಳಿಂದ ಕ್ಲಿಯರೆನ್ಸ್ ಆಗಬೇಕಾದ ಅವಶ್ಯಕತೆ ಇದೆ. ಈ ಕ್ಲಿಯರೆನ್ಸ್ ಸಿಗದೇ ಅನೇಕ ಸಂದರ್ಭಗಳಲ್ಲಿ ಸೇಲ್ಸ್‌ಟ್ಯಾಕ್ಸ್‌ನವರಿಂದ ಕ್ಲಿಯರೆನ್ಸ್ ಸಿಗುವುದಿಲ್ಲ, ಮತ್ತೊಂದು ಇಲಾಖೆಯಿಂದ ಕ್ಲಿಯರೆನ್ಸ್ ಸಿಗದೇ ಹೋದಾಗ ಕಡೆಗೆ ಸಾಲವನ್ನು ಕಟ್ಟುವುದಕ್ಕೆ ಆಗುವುದಿಲ್ಲ ಅಥವಾ ಒಂದು ಕಡೆ ಸೇಲ್ ಮಾಡುವುದಕ್ಕೂ ಆಗುವುದಿಲ್ಲ, ಟ್ರಾನ್ಸ್‌ಫರ್ ಮಾಡುವುದಕ್ಕೂ ಆಗುವುದಿಲ್ಲ. ಇಂಥ ಒಂದು ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಅವರು ಇರುವುದರಿಂದ ಈ ಏಕ ಗವಾಕ್ಷಿ ಯೋಜನೆಯನ್ನು ಇಂಡಸ್ಟ್ರಿ ಆರಂಭಿಸುವುದಕ್ಕೆ ಮಾತ್ರ ತರುವಂಥದ್ದಲ್ಲ. ಅದರ ಜೊತೆಯಲ್ಲಿ ಮುಚ್ಚುವುದಕ್ಕೆ ಕೂಡ, ಅಥವಾ ಅವರಿಗೆ ಹೆಚ್ಚು ನಷ್ಟವನ್ನು ಭರಿಸದೇ ಇಂಡಸ್ಟ್ರೀಯನ್ನು ಟ್ರಾನ್ಸ್‌ಫರ್ ಮಾಡುವ ನಿಟ್ಟಿನಲ್ಲಿ ಕೂಡ ಇದು ಅನ್ವಯವಾಗುವ ನಿಟ್ಟಿನಲ್ಲಿ ತಾವು ಕ್ರಮ ತೆಗೆದುಕೊಂಡಿದ್ದರೆ ಒಳ್ಳೆಯದ್ದಿತ್ತು ಎಂದು ನಾನು ಹೇಳಬಯಸುತ್ತೇನೆ. ಈ ಬಗ್ಗೆ ತಾವು ಯೋಚನೆ ಮಾಡಬೇಕೆಂದು ಈ ಸಲಹೆಯನ್ನು ತಮಗೆ ಕೊಡುತ್ತಿದ್ದೇನೆ. ಇನ್ನು ವಿಶೇಷವಾಗಿ ಮೂರು ಕೋಟಿ ರೂಪಾಯಿಗಳ ಮಿತಿ ಎಂದು ತಾವು ಹಾಕಿದ್ದೀರಿ. ನಾನು ಒಂದು ಸಣ್ಣ ಉದಾಹರಣೆಯನ್ನು ತಮಗೆ ಕೊಡುತ್ತೇನೆ. tread rubberingಗೆ ಸಂಬಂಧಪಟ್ಟಂಥದ್ದು. ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯಿಂದ ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಯಾವುದಿದೆ ಇವೊತ್ತು ಎಲ್ಲಾ ಟ್ರಾನ್ಸ್‌ಫರೆನ್ಸಿ ಆಕ್ಟ್‌ನ್ನು ಉಲ್ಲಂಘನೆ ಮಾಡಿಕೊಂಡು ನೇರವಾಗಿ ಆಂಧ್ರಪ್ರದೇಶದಲ್ಲಿರುವಂಥ ಪಿರಮಿಡ್ ಕಂಪನಿ ಮತ್ತು ಇನ್ನಿತರ ಕಂಪನಿಗಳಿಗೆ ಕೊಡುತ್ತಿದ್ದಾರೆ. ನಾನು ದಾಖಲೆ ಸಮೇತ ಇಲ್ಲಿ ಪ್ರಸ್ತಾವನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಆ ಕಂಪನಿಗಳಿಗೆ ಕೊಟ್ಟು ಕರ್ನಾಟಕ ರಾಜ್ಯದಲ್ಲಿರುವಂಥ tread rubber industries ಇವೊತ್ತು ನಷ್ಟದಲ್ಲಿರುವಂಥ ರೀತಿಯಲ್ಲಿ ಆಗಿದೆ. ಕೆ.ಎಸ್.ಆರ್.ಟಿ.ಸಿ.ಯವರೂ ಕೂಡ ಯಾವುದೇ ರೀತಿಯ ನಿಯಮಗಳನ್ನು ಫಾಲೋ ಮಾಡದೇ ಏನು ಒಪ್ಪಂದಕ್ಕೆ ಬಂದಿದ್ದರೋ ಅದನ್ನೂ ಕೂಡ ಮಾನ್ಯತೆ ಮಾಡಲಿಕ್ಕೆ ಆಗಿಲ್ಲ. ಮೂರು ಕೋಟಿ ರೂಪಾಯಿಗಳದ್ದಕ್ಕೆ ಮಾತ್ರ ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಎಂದು ಹೇಳುವ ಸ್ಪಷ್ಟವಾದ ನಿರ್ದೇಶನ ಇದ್ದರೂ ಕೂಡ ಈ ರೀತಿಯಾಗಿದೆ. ಏಕೆಂದರೆ ಇದು ಮೂರು ಕೋಟಿ ರೂಪಾಯಿಗಳಿಗೂ ಹೆಚ್ಚು

ಇರುವುದರಿಂದ ಯಾವುದೇ ರೀತಿಯಲ್ಲೂ ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ವ್ಯಾಪ್ತಿಗೆ ಬರುವುದಿಲ್ಲವೆನ್ನುವ ಅಂಶವನ್ನು ತಮ್ಮ ಗಮನಕ್ಕೆ ತರಲು ನಾನು ಇಚ್ಛಿಸುತ್ತೇನೆ. ಇನ್ನು ವಿಶೇಷವಾಗಿ ಸ್ಪೆಷಲ್ ಎಕನಾಮಿಕ್ ಜೋನ್‌ಗೆ ಕೊನೆಯ ಹಂತದಲ್ಲಿ ಇದಕ್ಕೆ ಮಂಜೂರಾತಿ ಸಿಕ್ಕಿದೆ ಎನ್ನುವಂಥ ಮಾಹಿತಿ ನನಗೆ ಸಿಕ್ಕಿದೆ. ಈ ಸ್ಪೆಷಲ್ ಎಕನಾಮಿಕ್ ಜೋನ್ ನಮ್ಮ ಕೋಸ್ಟಲ್ ಬೆಲ್ಟ್‌ಗಾಗಿ, ಈ ಹಿನ್ನೆಲೆಯಲ್ಲಿ ಕೂಡ ನಾನು ವಿಶೇಷ ವಿನಂತಿ ತಮ್ಮಲ್ಲಿ ಮಾಡುವಂಥದ್ದು ಏನೆಂದರೆ ನಮ್ಮ ಕೈಗಾರಿಕಾ ನಿಗಮದ ಕೈಯಲ್ಲಿ ಇರುವಂಥ 900 ಎಕರೆ ಜಾಗ ಯಾವುದಿದೆ, ಏಕೆಂದರೆ ಒಂದು ಪಲಯು ಆಗಿ ಆ ವಲಯದಲ್ಲಿರುವಂಥ ಕೈಗಾರಿಕೆಗಳಿಗೆ ಟ್ಯಾಕ್ಸ್ ಎಕ್ಸ್‌ಂಪಶನ್ ಅಥವಾ ಇನ್ನಿತರ ತೆರಿಗೆ ವಿನಾಯಿತಿಗಳು ಅಥವಾ ಎಕ್ಸೈಸ್ ಎಕ್ಸ್‌ಂಪಶನ್ ಮತ್ತು ಅನೇಕ ಡ್ಯೂಟಿ ಎಕ್ಸ್‌ಂಪಶನ್‌ಗಳು ಇರುವುದರಿಂದ ಅವೆಲ್ಲವೂ ಒಂದೇ ಏರಿಯಾದಲ್ಲಿ ಇರಬೇಕು ಎನ್ನುವ ಹಿನ್ನೆಲೆಯಲ್ಲಿ ವಿಶೇಷವಾಗಿ ಇದು ಬೈಕಂಬಾಡಿಯಂಥ ಏರಿಯಾದಲ್ಲಿ ಅದರ ಸುತ್ತಮುತ್ತಲೂ 900 ಎಕರೆ ಜಾಗ ಕೆ.ಐ.ಎ.ಡಿ.ಬಿಯವರದ್ದು ಏನಿದೆ ಅದರ ಸುತ್ತಮುತ್ತಲೂ ಇರುವ ಜಾಗವನ್ನು ಅಕ್ವೈರ್ ಮಾಡಿದಲ್ಲಿ ಬಹುಶಃ ಇದನ್ನು ಉಪಯೋಗ ಮಾಡಿಕೊಂಡು ಈ ಏಕ ಗವಾಕ್ಷಿ ಯೋಜನೆಯನ್ನು ಏನು ತಾವು ಉಲ್ಲೇಖ ಮಾಡುತ್ತಿದ್ದೀರಿ, ಅದರ ಮೂಲಕ ಬಹುಶಃ ದಕ್ಷಿಣ ಕನ್ನಡ ಜಿಲ್ಲೆ ಮಾತ್ರ ಅಲ್ಲ ಕೋಸ್ಟಲ್ ಬೆಲ್ಟ್‌ಗೆ ಒಂದು ದೊಡ್ಡ ಆರ್ಥಿಕ ಶಕ್ತಿಯನ್ನು ಕೊಡುವಂತಹ ರೀತಿಯಲ್ಲಿ ಆಗುತ್ತದೆ. ಈ ಹಿನ್ನೆಲೆಯಲ್ಲಿ ಕೆಐಎಡಿಬಿ ಹತ್ತಿರ ಇರುವಂಥ 900 ಎಕರೆ ಜಾಗವನ್ನೂ ಕೂಡ ಈ ಒಂದು ಯೋಜನೆಗೆ ಅಳವಡಿಸಬೇಕು ಎನ್ನುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಗೌರವಾನ್ವಿತ ಸದಸ್ಯರಾದಂತಹ ಮಾನ್ಯ ಸೋಮಶೇಖರ್ ರವರು, ಮಾನ್ಯ ಜಯಪ್ರಕಾಶ್‌ರವರು, ಗೌಡರು ಮತ್ತು ಯೋಗೀಶ್ ಭಟ್ ಅವರು ಕೆಲವು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಕೆಲವು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಮುಖ್ಯವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ತಾವೇನು ಟೀಕೆ ಮಾಡಿದಿರಿ ಅದಕ್ಕೆ ಮೊದಲು ಉತ್ತರ ಕೊಟ್ಟು ನಂತರ ಮಸೂದೆಗೆ ಬರುತ್ತೇನೆ. ಕೋಕ–ಕೋಲಾ ಕಂಪನಿಯಲ್ಲಿ ಪ್ರಾವಿಡೆಂಟ್ ಫಂಡ್ ಆಕ್ಟ್‌ನ ಉಲ್ಲಂಘನೆಯಾಗುತ್ತಿದೆ, ಕಾರ್ಮಿಕರಿಗೆ ಅನ್ಯಾಯವಾಗುತ್ತಿದೆ ಎನ್ನುವುದರ ಬಗ್ಗೆ ಪ್ರಸ್ತಾಪ ಮಾಡಿದಿರಿ. ತಾವು ಅದರ ಬಗ್ಗೆ ಒಂದು ನೋಟೀಸ್ ಸಹ ಕಳುಹಿಸಿದ್ದೀರಿ. ಅದು ನನ್ನ ಇಲಾಖೆಗೆ ನೇರವಾಗಿ ಬಂದಿಲ್ಲ. ಆದರೂ ಸಹ ನಾನು ಅದಕ್ಕೆ ಕಾರ್ಮಿಕ ಇಲಾಖೆಯಿಂದ ಸ್ಪಷ್ಟನೆ ಕೊಡುವುದಕ್ಕೆ ನೋಟ್ ಕಳುಹಿಸಿದ್ದೆ. ಆದರೂ ಕೂಡ ಯಾವ ಕೈಗಾರಿಕೆಯಲ್ಲಿ ಕಾರ್ಮಿಕರ ಮೇಲೆ ಏನೇ ಅನ್ಯಾಯವಾದರೂ ಅದನ್ನು ಸರಿಪಡಿಸುವುದು, ಆ ಕೈಗಾರಿಕೆ ಮೇಲೆ ಕ್ರಮ ತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯವಾಗುತ್ತದೆ. ಆ ದೃಷ್ಟಿಯಿಂದ ನಾವು ತಕ್ಷಣ ನಮ್ಮ ಇಲಾಖೆಯಿಂದ ಹಾಗೂ ಕಾರ್ಮಿಕ ಇಲಾಖೆಯಿಂದ ಇದರ ಬಗ್ಗೆ ತನಿಖೆ ಮಾಡಿ, ಒಂದು ವೇಳೆ ತಾವು ಹೇಳಿದ ಹಾಗೆ ಉಲ್ಲಂಘನೆ ಆಗಿದಿದ್ದರೆ, ಕ್ರಮ ತೆಗೆದುಕೊಂಡು ಅದರ ಬಗ್ಗೆ ನಿಮಗೆ ಆದಷ್ಟು ಬೇಗ ತಿಳಿಸುತ್ತೇನೆಂದು ನಾನು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. ನಂತರ ಈ ಸಕ್ಕರೆ ಕಾರ್ಖಾನೆಗಳ ಬಗ್ಗೆ ನಾನು ಒಪ್ಪಿಕೊಳ್ಳುತ್ತೇನೆ. ಅದು ಉದ್ದೇಶಪೂರ್ವಕವಾಗಿ ಆಗಿಲ್ಲ. ಕಳೆದ ಒಂದೂವರೆ ಎರಡು ವರ್ಷದ ಹಿಂದೆ ಈ ಸಿಂಗಲ್ ವಿಂಡೋ ಏಜೆನ್ಸಿ ಮತ್ತು ಹೈ ಪವರ್ ಕಮಿಟಿಯಲ್ಲಿ ಈ ಸಕ್ಕರೆ ಕಾರ್ಖಾನೆಗಳು ಮಂಜೂರಿಗೆ ಬಂದಾಗ ಒಂದು ಸಮಸ್ಯೆ ನಮ್ಮ ಮುಂದೆ

ಬಂತು. ಆ ಸಮಸ್ಯೆ ಏನೆಂದರೆ ಬಹಳಷ್ಟು ಸಕ್ಕರೆ ಕಾರ್ಖಾನೆಗಳು ಪ್ರಾರಂಭ ಮಾಡುವುದಕ್ಕೆ ಅರ್ಜಿಗಳು ಬಂದವು. ಶುಗರ್‌ಕೇನ್ ಏರಿಯಾ ಅದು ಲಿಮಿಟೆಡ್ ಇದೆ. ಶುಗರ್ ಫೆಡರೇಷನ್‌ನವರ ಜೊತೆ ನಾವು ಡಿಸ್‌ಕಸ್ ಮಾಡಿದಾಗ ಅವರು ನಮಗೆ ಏನು ಸಲಹೆ ಕೊಟ್ಟರು ಎಂದರೆ ಎಗ್ಸಿಸ್ಟಿಂಗ್ ಶುಗರ್ ಫ್ಯಾಕ್ಟರಿ ಯಾವುದಿದೆ, ಯಾರು ಎಕ್ಸ್‌ಪಾಂಡ್ ಮಾಡುತ್ತಾರೆ ಅವರಿಗೆ ಫಸ್ಟ್ ಪ್ರಿಯಾರಿಟಿ ಕೊಡಿ. ಏಕೆಂದರೆ ನಾಳೆ ವಯಬಿಲ್ ಆಗಬೇಕು. ಕಾಂಪಿಟೇಷನ್ ತೀವ್ರವಾಗಿದೆ. ಇದ್ದಂತಹ ಕೈಗಾರಿಕೆಗಳಿಗೆ ನೀವು ಸಹಾಯ ಮಾಡದೆ ಹೊಸ ಕೈಗಾರಿಕೆಗಳನ್ನು ತರುವುದಕ್ಕೆ ಪ್ರಯತ್ನ ಮಾಡಿದರೆ ನೀವು ಅದರಿಂದ ಹಲವಾರು ಕೈಗಾರಿಕೆಗಳು ಮುಚ್ಚುವುದಕ್ಕೆ ಸಾಧ್ಯವಿದೆ ಎನ್ನುವಂತಹ ಒಂದು ಸಲಹೆ ಆ ಸಂದರ್ಭದಲ್ಲಿ ಬಂತು. ಆ ಸಮಯದಲ್ಲಿ ನಾನೇ, ಹೈ ಪವರ್ ಕಮಿಟಿಯಲ್ಲಿ ಆಗಿನ ಪ್ರಿನ್ಸಿಪಲ್ ಸೆಕ್ರೆಟರಿ ಆಫ್ ಇಂಡಸ್ಟ್ರೀಸ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಮಾಡಿ ಇವತ್ತು ಟೋಟಲ್ ಅವೇಲೆಬಿಲಿಟಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಶುಗರ್‌ಕೇನ್ ಎಷ್ಟಿದೆ ಯಾವ ಜಿಲ್ಲೆಯಲ್ಲಿ ಎಷ್ಟು ಶುಗರ್ ಫ್ಯಾಕ್ಟರಿಗಳು ಬರುವುದಕ್ಕೆ ಅವಕಾಶ ಇದೆ ಇದರ ಬಗ್ಗೆ ವರದಿ ಕೊಡಿ ಎಂದು ಒಂದು ಆದೇಶ ಮಾಡಿದೆವು. ಆ ಪ್ರಕಾರ ವರದಿ ಈಗಾಗಲೇ ಬಂದಿದೆ. ಅದರ ಬಗ್ಗೆ ನಮ್ಮ ಸಕ್ಕರೆ ಸಚಿವರು ನಿರ್ಣಯ ಮಾಡಬೇಕಾಗಿದೆ. ಅದಕ್ಕೆ ನಾನೂ ಕೂಡ ರಿಕ್ವೆಸ್ಟ್ ಮಾಡಿದ್ದೇನೆ. ಆದಷ್ಟು ಬೇಗ ಅದು ನಿರ್ಣಯವಾದರೆ ಒಳ್ಳೆಯದು. ತಾವು ಹೇಳಿದ ಹಾಗೆ ನಾನು ಒಪ್ಪುತ್ತೇನೆ. ಒಂದು ಮಾತು ಹೇಳುತ್ತೇನೆ, ಈ ಬಿಜೆಪಿ, ಕಾಂಗ್ರೆಸ್, ಜನತಾದಳ ಎನ್ನುವುದನ್ನು ತಲೆಯಲ್ಲಿ ಇಟ್ಟುಕೊಂಡು ಯಾವ ಪ್ರಾಜೆಕ್ಟ್ ಅನ್ನೂ ನಾವು ಕ್ಲಿಯರ್ ಮಾಡುತ್ತಿಲ್ಲ. ನಮಗೆ ಪ್ರಾಜೆಕ್ಟ್ ಬೇಕು. ಅದನ್ನು ಬಿಜೆಪಿ ಹಾಕಿದರೇನು, ಕಾಂಗ್ರೆಸ್, ಹಾಕಿದರೇನು. ಇದರಲ್ಲಿ ಏನು ತಪ್ಪಿದೆ? ಯಾರು ಕೈಗಾರಿಕೆಗಳು ಹಾಕಿದರೇನು?

ಶ್ರೀ ಜಗದೀಶ್ ಶೆಟ್ಟರ್:–ನಾನು ಇಂಟರ್‌ವೀನ್ ಮಾಡುತ್ತೇನೆಂದು ತಾವು ತಪ್ಪು ತಿಳಿದುಕೊಳ್ಳಬೇಡಿ. ನೀವು ಇಲ್ಲಿಯವರೆಗೆ ಎಷ್ಟು ಅರ್ಜಿ ಬಂದಿತ್ತು, ಇಲ್ಲಿಯವರೆಗೆ ಎಷ್ಟು ಮಂಜೂರು ಮಾಡಿದ್ದೇವೆ, ಆ ಸ್ಟೇಟಸ್ ರಿಪೋರ್ಟ್ ಇಟ್ಟುಬಿಡಿ. ಗೊತ್ತಾಗಿ ಬಿಡುತ್ತದೆ. ಯಾವ ಅರ್ಜಿ ಪೆಂಡಿಂಗ್ ಇದೆ, ಯಾವ ಅರ್ಜಿ ಕ್ಲಿಯರೆನ್ಸ್ ಮಾಡಿದ್ದೀರಿ? ಯಾವ ಡೇಟ್‌ಗೆ ಅರ್ಜಿ ಕೊಟ್ಟಿದ್ದರು? ಇದರ ವಿವರಗಳನ್ನು ಕೊಟ್ಟುಬಿಟ್ಟರೆ ನಿಮ್ಮ ರಾಜಕೀಯ ಹಿನ್ನೆಲೆ ಎಲ್ಲಾ ಗೊತ್ತಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:–ನಾನು ಬಹಳ ಸ್ಪಷ್ಟವಾಗಿ ಮಾತನಾಡುತ್ತೇನೆ. ಹಾಗಾಗಿ ಜನತಾದಳದವರು ಪ್ರಾರಂಭಮಾಡುತ್ತಿದ್ದಾರೆ, ಕಾಂಗ್ರೆಸ್‌ನವರು ಇದ್ದಾರೆ ಹಾಗೆ ಎನ್ನುವ ವಿಚಾರ ಎಲ್ಲೂ ಬಂದಿಲ್ಲ. ಈಗ ತಾವು ಯಾವುದು ರೆಫರ್ ಮಾಡುತ್ತೀರಿ, ಅವರ ಹೆಸರಿನಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ಅವರು ನಿಮ್ಮ ಪಕ್ಷದವರು ಇವ್ವರೂ ನಮಗೆ ಬಹಳ ಸ್ನೇಹಿತರು. ಅವರನ್ನು ಕೇಳಿ. ನಮಗೆ ಬಹಳ ಒಳ್ಳೆಯ ಸ್ನೇಹಿತರು. ಅವರಿಗೆ ನಾನು ಹಲವಾರು ಭಾರಿ ಹೇಳಿದ್ದೇನೆ. ಪ್ರಾಜೆಕ್ಟ್ ಕ್ಲಿಯರ್ ಮಾಡುವ ಜವಾಬ್ದಾರಿ ನಮ್ಮ ಮೇಲೆ ಬಿಡಿ.

ಶ್ರೀ ಜಗದೀಶ್ ಶೆಟ್ಟರ್:–ನೀವು ಕ್ಲಿಯರ್ ಆಗುತ್ತಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.–ಅವರು ಏನು ಮಾಡುತ್ತಿದ್ದಾರೆ ತಮ್ಮ ಜಿಲ್ಲೆಯಲ್ಲಿ ಒಂದು ಕೈಗಾರಿಕೆ ಹಾಕುತ್ತಿದ್ದಾರೆ. ನಾವು ಏಕೆ ಅಡ್ಡಬರಬೇಕು? ಏನು ತೊಂದರೆ? ಹಾಗಾಗಿ ನಾವು ಏಕೆ ಅಡ್ಡ ಬರಬೇಕು. ಅವರು ಇನ್‌ವೆಸ್ಟ್ ಮಾಡುವವರು. ಅವರು ಹಣ ತರುವವರು, ಎಂಪ್ಲಾಯ್‌ಮೆಂಟ್ ಕೊಡುವವರು. Why should I object? ನನಗೆ ಏನು ಅವಶ್ಯಕತೆ ಇದೆ? ಹಾಗಾಗಿ ನಾನು

ಸಕ್ಕರೆ ಸಚಿವರಿಗೆ ಅದರ ಬಗ್ಗೆ ತಕ್ಷಣ ನಿರ್ಣಯ ಮಾಡಬೇಕೆಂದು ಹೇಳಿದ್ದೇನೆ. ನಾನು ಬಹಳ ಸ್ಪಷ್ಟವಾಗಿ, ವಿನಯದಿಂದ ಹೇಳುವುದೇನೆಂದರೆ ಅದು ಬಿಟ್ಟು ನಮಗೆ ಬೇರೆ ವಿಚಾರ ಏನೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್:–ಪ್ರತಿಸಲ ಈ ಸದನದಲ್ಲಿ ಚರ್ಚೆ ಮಾಡಿದಾಗ ಹಾಗೆ ಹೇಳುತ್ತೀರಿ. ಇದರ ಬಗ್ಗೆ ಲಾಸ್ಟ್‌ಟೈಂ ಚರ್ಚೆ ಬಂತು. ಆಗ ಶ್ರೀ ಶಿವಾನಂದ ಪಾಟೀಲ್ ಇದ್ದರು. ಆಗ ಕೂಡ ರೆಫರ್ ಮಾಡಿದ್ದೇವೆಂದು ಹೇಳಿದ್ದಾರೆ. ಇವತ್ತಿನ ಹಾಗೆ ಸೇಮ್ ಉತ್ತರ ಕರಟಿನ್ಕೊಡ್. ಮತ್ತೆ ಇದರಲ್ಲಿ ಬದಲಾವಣೆ ಏನೂ ಇಲ್ಲ. ಹಾಗಾಗಿ ನಿಮ್ಮ ಉತ್ತರಕ್ಕೆ ಏನೂ ಮಹತ್ವ ಇಲ್ಲ. ನಿಮ್ಮ ಉತ್ತರ ಯಾವ ಪ್ರಯೋಜನಕ್ಕೆ ಬರುತ್ತದೆ?

ಶ್ರೀ ಆರ್.ವಿ. ದೇಶಪಾಂಡೆ:–ಅವರ ಪ್ರಾಜೆಕ್ಟ್ ಯಾವಾಗ ಕ್ಲಿಯರ್ ಮಾಡುತ್ತೇವೋ ಅವರು ನಮಗೆ ಯಾವಾಗ ಪೇಡ ತಂದುಕೊಡುತ್ತಾರೊ ಆಗ ಪ್ರಯೋಜನವಾಗುತ್ತದೆ. ಆದ್ದರಿಂದ ಕೆಲಸ ನಾವೂ ಕೂಡ ಮಾಡುತ್ತೇವೆ. ನಾವು ಯಾವ ಪ್ರಾಜೆಕ್ಟ್‌ಗಳಿಗೂ ಕೂಡ ಅಡ್ಡ ಬಂದಿಲ್ಲ. ಇವತ್ತು ಭಟ್ಟರು ಇದ್ದಾರೆ, ಅವರು ಬಿಜೆಪಿ ಎಂಎಲ್‌ಎ ಅವರನ್ನು ಕೇಳಿ. ಅವರನ್ನು ಸೇರಿಸಿ, ಮಂಗಳೂರಿನಲ್ಲಿ ಒಂದು ಸಭೆ ಮಾಡಿದ್ದೇನೆ ಕೋಲ್ಡ್ ಸ್ಟೋರೇಜ್ ಮಾಡಬೇಕಾದರೆ. ಇದರಲ್ಲಿ ಏನು ಇದೆ? Ultimate ಆಗಿ ಇನ್‌ವೆಸ್ಟ್‌ಮೆಂಟ್ ಬರಬೇಕು, ರಾಜ್ಯ ಬೆಳೆಯಬೇಕು ಎಂದು ಎಲ್ಲರ ಸದುದ್ದೇಶ ಇದ್ದಾಗ ಅಲ್ಲಿ ಬಿಜೆಪಿ ಅವರು ಕಾಂಗ್ರೆಸ್ಸಿನವರು, ಜನತಾ ದಳದವರು ಎಂದು ಹೇಳುವುದಕ್ಕೆ ಪ್ರಾರಂಭ ಮಾಡಿದರೆ ಕೈಗಾರಿಕೆಗಳು ಬೆಳೆಯುವುದಕ್ಕೆ ಆಗುವುದಿಲ್ಲ. ಇನ್ನೊಂದು ತಾವು ಹೇಳಿದ ಹಾಗೆ ಸಬ್ಸಿಡಿ ಬಗ್ಗೆ ನಿಜ ಬಹಳಷ್ಟು ತೊಂದರೆಯಾಗಿದೆ. ಸಣ್ಣ ಕೈಗಾರಿಕೆಗಳು ನೇರವಾಗಿ ನಮಗೆ ಸಂಬಂಧಪಟ್ಟಿಲ್ಲ ಎಂದರೂ ಕೂಡ ಬಹಳ ತೊಂದರೆಯಾಗಿದೆ. ಇದನ್ನು ನಾವು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಈಗಾಗಲೇ ಅವರು ಒಂದು ಸಭೆಯನ್ನು 15–20 ದಿವಸದ ಹಿಂದೆ ಮಾಡಿ ಅಲ್ಲಿ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದಾರೆ. ತಾವು ಎಷ್ಟು ಬೇಗನೆ either by providing in the budget ಆ ಕೆಎಸ್‌ಎಫ್‌ಸಿ ಮುಖಾಂತರ ಬಾಂಡ್ ಇಶ್ಯೂ ಮಾಡಿ ಕೊಡಿ ಎಂದು ಹೇಳಿದ್ದೇವೆ. ಸಣ್ಣ ಕೈಗಾರಿಕೆಗಳಿಗೆ ಬಹಳ ಅನಾನುಕೂಲವಾಗಿದೆ, ತೊಂದರೆಯಾಗಿದೆ. ಇದರಲ್ಲಿ ಯಾವುದೇ ಸಂದೇಹ ಇಲ್ಲ. ಯಾವುದೆ ಎರಡು ಮಾತಿಲ್ಲ. ಹಾಗಾಗಿ ಅದರ ವಿಚಾರದಲ್ಲಿ ಸಮಸ್ಯೆ ಬಗೆಹರಿಸುವುದು ವಿಳಂಬವಾಗಿದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಅದನ್ನು ಹೋಗಲಾಡಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಮತ್ತೆ ಎಂಪಿಎಂ ಬಗ್ಗೆ ಹೇಳಿದಿರಿ. ಎಂಪಿಎಂ ಕೈಗಾರಿಕೆ ಸುಧಾರಣೆಯಾಗಿದೆ. ಅದಕ್ಕೆ ಶ್ರೀ ಕುಟಿನೊ, ಅಲ್ಲಿ ಕೆಲಸ ಮಾಡುವ ಅಧಿಕಾರಿಗಳು, ಅಲ್ಲಿ ಕೆಲಸ ಮಾಡುವ ಕಾರ್ಮಿಕರು ಕಾರಣ. ಹಾಗೂ ಸರ್ಕಾರದ ನೀತಿನೂ ಕಾರಣ. ನಾವು ಯಾವತ್ತಿಗೂ ಅದರಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಯಾವ ಕೈಗಾರಿಕೆಯಲ್ಲೂ ನಾವು ಇಂಟರ್‌ಫಿಯರ್ ಆಗುವುದಿಲ್ಲ. ಓವರಾಲ್ ಈ ಸ್ಟೀಲ್ ಹಾಗೂ ಸಿಮೆಂಟ್ ಸೆಕ್ಟರ್ ಭಾರತ ದೇಶದಲ್ಲಿ ಚೆನ್ನಾಗಿ ನಡೆಯುತ್ತಿದೆ. ಈಗ ನಡೆಯುತ್ತಿರುವುದೇ ಸ್ಟೀಲ್ ಸಿಮೆಂಟ್ ಹಾಗೂ ಪೇಪರ್. ಅದಕ್ಕೆ ಒಂದು ಕಾರಣ ಇದೆ. ಆದರೆ ಅಲ್ಲಿ ಸಿವಂಡಿ ಅವರನ್ನು ಬದಲಾವಣೆ ಮಾಡಬೇಕು ಎಂದು ನಮ್ಮ ಮುಂದೆ ಪ್ರಸ್ತಾವನೆ ಇಲ್ಲ. ಈಗ ಯಾವ ಅಧಿಕಾರಿ ಎಲ್ಲಿ ಇರಬೇಕು? ಎಲ್ಲಿ ಇರಬಾರದು, ಅದನ್ನು ಡಿಪಿಎಆರ್ ಮತ್ತು ಚೀಫ್ ಮಿನಿಸ್ಟರ್ ನಿರ್ಣಯ IAS Officers ಬಗ್ಗೆ ಮಾಡುತ್ತಾರೆ. ಆದರೆ ಅಲ್ಲಿ ಚೇರ್‌ಮನ್ ಏನಿದ್ದಾರೆ ಅವರನ್ನು ತೆಗೆದು ಮತ್ತೊಬ್ಬರನ್ನು ಅಪಾಯಿಂಟ್ ಮಾಡಬೇಕೆನ್ನುವ ಒಂದು ಪ್ರಸ್ತಾವನೆ ಇಲ್ಲ. ನನ್ನ ಹತ್ತಿರ ಅದರ ಕಡತ ಇಲ್ಲ. ನಾವು ಆ ಪ್ರಸ್ತಾವನೆಗೆ ಕಡತಕ್ಕೆ ಪುಂಜುಪಾತಿ ಕೊಡುವ ಪ್ರಶ್ನೆ ಇಲ್ಲ. ಮತ್ತೆ ನಾನು ತಿಳಿಯಕೊಂಡಿರುವ

ಹಾಗೆ subject to correction ಎಂಪಿಎಂ ಏನಿದೆ ಅವರ ಬೈ ಲಾಸ್ ಏನಿದೆ ಅದರಲ್ಲಿ ನಾನ್ ಅಫಿಷಿಯಲ್ ಚೇರ್‌ಮನ್‌ಗೆ ಅವಕಾಶ ಇಲ್ಲವೆಂದು ನಾನು ಭಾವಿಸುತ್ತೇನೆ. This is my information subject to correction. ಹಾಗಾಗಿ ಇದರ ಬಗ್ಗೆ ವಿಶ್ವಾಸ ಕೊಡುತ್ತೇನೆ. ಕೈಗಾರಿಕೆಗಳು ಚೆನ್ನಾಗಿ ನಡೆಯುತ್ತಿವೆ. ಇನ್ನೂ ಸಸ ಚೆನ್ನಾಗಿ ನಡೆಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಆದುದರಿಂದ ನಮ್ಮ ಸ್ನೇಹಿತರಾದಂತಹ ಮಾನ್ಯ ಸೋಮಶೇಖರ್ ಅವರು ಸರೋಜಿನಿ ಮಹಿಷಿ ವರದಿ ಬಗ್ಗೆ ಹೇಳಿದರು. ಅದನ್ನು ನಮ್ಮ ಲೆವೆಲ್‌ನಲ್ಲಿ ಸಹ ರಿವ್ಯೂ ಮಾಡುತ್ತಿದ್ದೇವೆ. ಪರ್ಸನಲಿ ನಾನು ಡಿ.ಓ. ಲೆಟರ್‌ನ್ನು ಜಿಲ್ಲಾಧಿಕಾರಿಗಳಿಗೆ ಬರೆದಿದ್ದೇನೆ. ಪ್ರಿನ್ಸಿಪಲ್ ಸೆಕ್ರೆಟರಿ ಕಡೆಯಿಂದ ಆದೇಶ ಕೊಟ್ಟಿದ್ದೇವೆ. ಇವತ್ತು ಹೊಸ ಕೈಗಾರಿಕೆಗಳು ಉದಾಹರಣೆಗೆ ಟಯೋಟಾ ಕಿರ್ಲೋಸ್ಕರ್‌ನಲ್ಲಿ 97–98 ಪರ್ಸೆಂಟ್ ಕನ್ನಡಿಗರು ಇದ್ದಾರೆನ್ನುವಂತಹ ವಿಚಾರವನ್ನು ಇಲ್ಲಿ ಅಥವಾ ಮೇಲ್ಮನೆಯಲ್ಲಿ ಕೊಟ್ಟಿದ್ದೇನೆ. ಹಾಗಾಗಿ ಅದಷ್ಟು ಮಟ್ಟಿಗೆ ಕನ್ನಡಿಗರಿಗೆ ಉದ್ಯೋಗಾವಕಾಶ ಸಿಗಬೇಕು ಅದನ್ನು ಇಂಪ್ಲಿಮೆಂಟ್ ಮಾಡುವ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ತಾವು ರಿಸರ್ವೇಷನ್ ಬಗ್ಗೆ ಏನು ಹೇಳುತ್ತಿದ್ದೀರಿ ಆ ಒಂದು ವಿಚಾರದಲ್ಲಿ ಕಾನ್ಸೆನ್ಸಸ್ ನ್ಯಾಷನಲ್ ಲೆವೆಲ್‌ನಲ್ಲಿ ಬರಬೇಕು. ಇದರ ಬಗ್ಗೆ ಚಿಂತನೆ ನಮ್ಮ ಕಾಂಗ್ರೆಸ್ ಪಾರ್ಟಿಯಿಂದ ಸಿಮ್ಲಾದಲ್ಲಿ ಆಯಿತು. ಎಲ್ಲಿಯತನಕ ನ್ಯಾಷನಲ್ ಲೆವೆಲ್‌ನಲ್ಲಿ ಕಾನ್ಸೆನ್ಸಸ್ ಬರುವುದಿಲ್ಲವೋ ಅಲ್ಲಿ ತನಕ ಟೋಟಲ್ ರಿಸರ್ವೇಷನ್ ಪ್ರೈವೇಟ್ ಸೆಕ್ಟರ್‌ನಲ್ಲಿ ಬರುವುದಿಲ್ಲ. ಹಾಗಾಗಿ ಈ ತರಹದ ಒಂದು ವಾತಾವರಣ ತಯಾರಾಗುತ್ತಿದೆ. ಅದು ಆಗಬಹುದು. ಹಾಗಾಗಿ ಅದರಲ್ಲಿ ನಮ್ಮದೇನೂ ಪರ್ಸನಲ್ ರಿಸರ್ವೇಷನ್ ಏನೂ ಇಲ್ಲ. ಪ್ರೈವೇಟ್ ಸೆಕ್ಟರ್ ಇನ್‌ವೆಸ್ಟ್‌ಮೆಂಟ್ ಬಂದಾಗ ಒಂದು ಕಾಲದಲ್ಲಿ ಲೈಸೆನ್ಸ್ ಇತ್ತು. ಕೈಗಾರಿಕಾ ಮಾಲೀಕರು ನಮ್ಮ ಹತ್ತಿರ ಬರುತ್ತಿದ್ದರು. ಇವತ್ತು ಯಾವ ಲೈಸೆನ್ಸ್ ಇಲ್ಲ. ಎಲ್ಲಿ ಬೇಕಾದರೂ ಕೈಗಾರಿಕೆ ಹಾಕಬಹುದು. ಮಹಾರಾಷ್ಟ್ರ ಆಂಧ್ರ ಅಥವಾ ತಮಿಳುನಾಡಿಗೆ ಹೋಗಬಹುದು. ಹಾಗಾಗಿ ಇವತ್ತು ಎಂಟ್ರೆರ್ ಫ್ರೀ ಎನ್‌ವಿರಾನ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ ಇಲ್ಲೇ ನೀನು ಕೈಗಾರಿಕೆ ಹಾಕು, ಅಲ್ಲಿ ಕೈಗಾರಿಕೆ ಹಾಕಬೇಕು ಎನ್ನುವ ದಿನ ಇಲ್ಲ. ಮೊದಲು ಇತ್ತು, When, we had licences, Now we don't have licences. For the information of the House ಇವತ್ತು ಯಾವ ಕನ್ಸಿಷನ್ ಇಲ್ಲ. ದಿನಾಂಕ 1.1.2001ರಿಂದ ಯಾವ ರಾಜ್ಯದಲ್ಲೂ ಕೂಡ ಯಾವ ಕೈಗಾರಿಕೆಗೂ ಕನ್ಸಿಷನ್ ಕೊಡುತ್ತಿಲ್ಲ. ಒಂದು ಎಂಟ್ರಿ ಟ್ಯಾಕ್ಸ್ ಕ್ಯಾಪಿಟಲ್ ಗೂಡ್ಸ್‌ಗೆ ಹಾಗೂ ಎಕ್ಸ್‌ಪೋರ್ಟ್ ಓರಿಯೆಂಟೆಡ್ ಯುನಿಟ್ ಇದ್ದರೆ ಅಲ್ಲಿ ರಾ ಮೆಟೀರಿಯಲ್ ಹೋಗುತ್ತಿದ್ದರೆ ಅದರ ಸೇಲ್ಸ್ ಟ್ಯಾಕ್ಸ್ is said to have gone. ದಿ: 1.04 ರಿಂದ ಸ್ಟ್ಯಾಂಪ್ ಡ್ಯೂಟಿ ಕನ್ಸಿಷನ್ ಹೋಗಿದೆ. So that was a consensus ನ್ಯಾಷನಲ್ ಲೆವೆಲ್‌ನಲ್ಲಿ ಯುನಿಯನ್ ಫೈನಾನ್ಸ್ ಮಿನಿಸ್ಟರ್ ಒಂದು ಮೀಟಿಂಗ್ ಮಾಡಿ ಸೇಲ್ಸ್ ಟ್ಯಾಕ್ಸ್ ಕನ್ಸಿಷನ್ ವಿಚಾರದಲ್ಲಿ ಬಹಳ ಕಾಂಪಿಟೇಷನ್ ಆಗುತ್ತಿದೆ. ಅದು ಅನ್‌ಹೆಲ್ತಿ ಕಾಂಪಿಟೇಷನ್ ನಡೆಯುತ್ತಿದೆ. ಎಂದು ಹೇಳಿದಾಗ All States have agreed.

4.10 ಪಿಎಂ

ಪೈಪ್‌ಲೈನ್‌ಗೆ ಸಂಬಂಧಿಸಿದ್ದು ಕೆಲವು ರಾಜ್ಯಗಳಿಗೆ ಕೊಟ್ಟಿದ್ದಾರೆಯೇ ವಿನಹ Over-all, the concessions have gone ಮುಖ್ಯವಾಗಿ ಕನ್‌ಸೆಷನ್ಸ್‌ನಿಂದ, ಮೂಲಭೂತ ಸೌಕರ್ಯಗಳು, ಮಾನವ ಸಂಪನ್ಮೂಲಗಳು, ಸಂಶೋಧನೆ ಇವನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಇವತ್ತು ಸರ್ಕಾರದಿಂದ ಆಗುತ್ತಿದೆ. ಇವತ್ತು ನಮ್ಮ ಸ್ನೇಹಿತರಾದ ಶ್ರೀ ಜಯಪ್ರಕಾಶ ಹೆಗಡೆಯವರು ಹೇಳಿದರು,

ಪ್ರಾಜೆಕ್ಟ್ ಇಂಪ್ಲಿಮೆಂಟೇಷನ್‌ಗೆ ತೊಂದರೆಯಾಗಬಹುದು ಎಂದು ನಾನು ಒಪ್ಪುತ್ತೇನೆ, ಏಕೆಂದರೆ, Project implementation is not in my hand.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:–ನಾನು ಹೇಳುತ್ತಿರುವುದು ಪ್ರಾಜೆಕ್ಟ್ ಇಂಪ್ಲಿಮೆಂಟೇಷನ್ ತೊಂದರೆಯಲ್ಲ, ನಿಮ್ಮ ಕ್ಲಿಯರೆನ್ಸ್ ತೊಂದರೆ.

ಶ್ರೀ ಆರ್.ವಿ. ದೇಶಪಾಂಡೆ:–ಇಂಪ್ಲಿಮೆಂಟೇಷನ್‌ಗೆ ಸಂಬಂಧಿಸಿದಂತೆ ಸರ್ಕಾರದಿಂದ ಕೆಲವು ವಿಳಂಬಗಳಾಗುತ್ತವೆ, ಪವರ್ ಮಂಜೂರು ಮಾಡುವುದರಲ್ಲಿ ಅಥವಾ ಮತ್ತೊಂದರಲ್ಲಿ ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳಬಹುದು, ಆದರೆ ಪ್ರಮೋಟರ್ಸ್ ಏನಿದ್ದಾರಲ್ಲಾ ಅವರು ಫೈನಾನ್ಸ್ ಅರೆಂಜ್ ಮಾಡಬೇಕಾಗುತ್ತದೆ. so many issues one there ತಾವು ಪ್ರಾಜೆಕ್ಟ್ ಕ್ಲಿಯರೆನ್ಸ್‌ಗೆ ತೊಂದರೆಯಾಗುತ್ತಿದೆ ಎಂದು ಹೇಳುತ್ತಿದ್ದೀರಿ; ಆ ರೀತಿ ಆಗುತ್ತಿಲ್ಲ. ಹಾಗಾಗಿ ಇವತ್ತೇನು ಈ ಮಸೂದೆಯನ್ನು ಪಾಸ್ ಮಾಡುತ್ತಿದ್ದೀರಿ, ಇದರಲ್ಲಿ ಒಂದು ರೂಲ್ಸ್ ಮಾಡಿದ್ದೇವೆ, ಅಪ್ಲಿಕೇಷನ್ ಕೊಟ್ಟ 35 ದಿವಸದಲ್ಲಿ ಪ್ರಾಜೆಕ್ಟ್ ಕ್ಲಿಯರ್ ಆಗಬೇಕು, ಕ್ಲಿಯರ್ ಆಗಲಿಲ್ಲವೆಂದರೆ deemed to have been cleared ಎನ್ನುವ ಪ್ರಾವಿಷನ್ ಅನ್ನು ರೂಲ್ ಮಾಡುತ್ತಿದ್ದೇವೆ. ಭಾರತ ದೇಶದಲ್ಲಿ ಇದನ್ನು ಮೊದಲ ಬಾರಿ ಮಾಡುತ್ತಿದ್ದೇವೆ, ಆದುದರಿಂದ ತೊಂದರೆಯೇನೂ ಇಲ್ಲ; ಡೀಮ್ಡ್ ಕ್ಲಿಯರೆನ್ಸ್ ಕೊಡುತ್ತಿದ್ದೇವೆ. ಅಷ್ಟೇ ಅಲ್ಲ, ಸೆಲ್ಫ್ ಸರ್ಟಿಫಿಕೇಷನ್, ಈಗ ಹಲವಾರು ಕಡೆ ಕೈಗಾರಿಕೆಗಳು ಪ್ರಾರಂಭವಾಗುತ್ತವೆ, ಎಲ್ಲಾ ರೀತಿ ಇದೆ ನಮಗೆ ಪರ್ಮಿಷನ್ ಕೊಡಿ ಎಂದು ನಮ್ಮ ಸರ್ಕಾರಕ್ಕೆ ಬರೆಯುತ್ತಾರೆ. They don't get permission. Therefore we have made a provision for self certification. ಒಂದು ವೇಳೆ ಸರ್ಕಾರದ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ, We have complied with every law ಎಂದು ಅಫಿಡೇವಿಟ್ ಕೊಟ್ಟರೆ They can start the industry without waiting for the permission of the Government. ಅದಕ್ಕೂ ಕೂಡ ಪ್ರಾವಿಷನ್ ಅನ್ನು ಸರ್ಕಾರದ ವತಿಯಿಂದ ಮಾಡಿದ್ದೇವೆ. ಏಕೆಂದರೆ ಇವತ್ತು ವಾತಾವರಣ ಹಾಗೆ ಆಗಿದೆ, ಈ ಸ್ಪರ್ಧಾತ್ಮಕ ವಾತಾವರಣದಲ್ಲಿ ಎಲ್ಲಿಯವರೆಗೆ ಸರಳೀಕರಣ ತರುವುದಿಲ್ಲ, ಎಲ್ಲಿಯವರೆಗೆ ಇನ್‌ವೆಸ್ಟರ್ಸ್‌ನಲ್ಲಿ ಕಾನ್ಫಿಡೆನ್ಸ್ ತರುವುದಿಲ್ಲ, ಅಲ್ಲಿಯವರೆಗೆ ಇದು ಕಷ್ಟವಾಗುತ್ತದೆ. ನಮ್ಮ ಗೌಡರು ಕಾರ್ಮಿಕರ ಬಗ್ಗೆ ಮಾತನಾಡಿದರು, ಇವತ್ತೇನು ಕೇಂದ್ರ ಸರ್ಕಾರ ಆಕ್ಟ್ ಅನ್ನು ಇಂಪ್ರೂವ್ ಮಾಡಲಿಕ್ಕೆ ಹೇಳಿದೆ, ಕ್ಲಾಸ್ (18)ನಲ್ಲಿ ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ, ಅವರೇನು ಹೇಳುತ್ತಾರೆಂದರೆ ಏನು ಅಪೀಲು ಎನ್ನುವುದನ್ನು ಸ್ಪಷ್ಟನೆ ಮಾಡಿ ಎಂದು ಹೇಳಿದ್ದಾರೆ ಅವು ಮುಂಚೆ ಇರಲಿಲ್ಲವೆಂಬಲ್ಲ. ಮಾನ್ಯ ಯೋಗೀಶ್‌ಭಟ್‌ರವರು ಅನಾರೋಗ್ಯವಾದ ಕೈಗಾರಿಕೆಗಳ ಬಗ್ಗೆ ಮಾತನಾಡಿದರು, ತಾವು ತಿಳಿದುಕೊಳ್ಳಬೇಕಾಗಿತ್ತು, ಕರ್ನಾಟಕ ಸರ್ಕಾರ new B.I.F.R. ಪಾಲಿಸಿ ತಂದಿದೆ. ಮುಂಚೆ ದೊಡ್ಡ ಹಾಗೂ ಅತಿ ದೊಡ್ಡ ಕೈಗಾರಿಕೆಗಳು ಅನಾರೋಗ್ಯವಾದಾಗ B.I.F.R. ನಲ್ಲಿ ರಿಜಿಸ್ಟರ್ ಆಗಿ, They were entitled for some incentives ಈಗ ಹಾಗಿಲ್ಲ, ಸಣ್ಣ ಕೈಗಾರಿಕೆಗಳೂ ಕೂಡ ಅನಾರೋಗ್ಯವಾದಾಗ, ರಿಸರ್ವ್ ಬ್ಯಾಂಕ್ ಗೈಡ್‌ಲೈನ್ಸ್‌ನ ಕೆಳಗಡೆ ಬಂದರೆ ಡಿ.ಸಿ.ಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದೇವೆ ಅವರು ಶಿಫಾರಸ್ಸು ಮಾಡಿದರೆ, those cases are also considered for Sales Tax deferment and KPTCL deferment. It is already the policy of the Government. ಈಗಾಗಲೇ ಇದನ್ನು ಪ್ರಕಟಣೆ ಮಾಡಿ ಒಂದು ವರ್ಷವಾಗಿದೆ, ಹಲವಾರು ಕೈಗಾರಿಕೆಗಳು ಅದರ ಲಾಭವನ್ನೂ

ಕೂಡ ಪಡೆದುಕೊಳ್ಳುತ್ತಿದ್ದಾವೆ. ಮುಖ್ಯವಾಗಿ ರಾಜ್ಯದಲ್ಲಿ ಕೈಗಾರಿಕೆಗಳು ಬೆಳೆಯಬೇಕು, ಸಣ್ಣ, ದೊಡ್ಡ, ಅತಿ ದೊಡ್ಡ ಕೈಗಾರಿಕೆಗಳಿರಬಹುದು, ಅವರಿಗೆ ಒಳ್ಳೆಯ ಭಾವನೆಯಿಂದ ಅವರ ಕೆಲಸವಾಗಬೇಕು, ಪಾರದರ್ಶಕತೆ ಇರಬೇಕು, ಸರಳತೆ ಇರಬೇಕೆನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಹಾಗಾಗಿ ಕರ್ನಾಟಕದಲ್ಲಿ ಸಕ್ಷೇಸೀವ ಗೌರ್ನಮೆಂಟ್ಸ್ ಇವೊತ್ತು ಕೈಗಾರಿಕೆಗೆ ಪ್ರೋತ್ಸಾಹ ಕೊಡುತ್ತಾ ಬಂದಿದ್ದಾರೆ. ಈ ಸಂದರ್ಭದಲ್ಲಿ ಸದನದ ಮಾಹಿತಿಗೋಸ್ಕರ ನಾನು ರ್ಯಾಂಕಿಂಗ್ ಹೇಳುತ್ತೇನೆ, June 2003, Centre for Monitoring of Indian Economy, CMIE, an Independent Agency, they say in India we stand 4th as far as the investments are concerned. Then, again according to CMIE report of June 2003, projects worth Rs. 41,743 crores are under the implementation of Karnataka, which has been ranked after Maharashtra, Gujarath and Tamilnadu. As per data published by CMIE in June 2003, Karnataka ranks 2nd among the States in attracting FDI during the last 5 years from January 1997 to November 2002 amounting more than Rs. 16,077.24 crores. ಹಾಗಾಗಿ ಇವತ್ತು ಎಲ್ಲರ ಸಹಕಾರದಿಂದ, ಸಕ್ಷೆಸಿವ್ ಗೌರ್ನಮೆಂಟ್‌ನಲ್ಲಿ ಬಹುಶಃ ಮಹಾರಾಜರ ಕಾಲದಿಂದಲೂ, ಸರ್.ಎಂ. ವಿಶ್ವೇಶ್ವರಯ್ಯನವರ ಕಾಲದಿಂದಲೂ ರಾಜ್ಯದಲ್ಲಿ ಕೈಗಾರಿಕೆಗಳು ಬೆಳೆದಿದ್ದಾವೆ, ಬೆಳೆಯುವುದಕ್ಕೆ ಎಲ್ಲಾ ರೀತಿಯ ಪ್ರಯತ್ನಗಳಾಗಿವೆ, ಮತ್ತೆ ಶಾಸನ ಸಭೆ ಕೂಡ ಸಾಕಷ್ಟು ಬೆಂಬಲವನ್ನು ಕೊಡುತ್ತಾ ಬಂದಿದೆ. ಹಾಗಾಗಿ ಈ ಒಂದು ತಿದ್ದುಪಡಿಯನ್ನು ಪ್ರಪೋಸ್ ಮಾಡಿದ್ದೇವೆ, They are all good suggestions ಉದಾಹರಣೆಗೆ, ಇನ್‌ಶೂರೆನ್ಸ್ ಬಗ್ಗೆ ಏನಾದರೂ ಮಾಡಿ ಎಂದು ಹೇಳಿದ್ದಾರೆ, It is in the interest of labour only- ಹಾಗಾಗಿ ಒಪ್ಪಿಕೊಂಡಿದ್ದೇವೆ ಈ ಸದನ ಅದನ್ನು ಒಪ್ಪಿಕೊಳ್ಳಬೇಕೆಂದು ಈ ಮುಖಾಂತರ ನಾನು ವಿನಂತಿ ಮಾಡುತ್ತೇನೆ.

ಶ್ರೀ ಬಿ. ಸೋಮಶೇಖರ್:ಮಾನ್ಯ ಸಭಾಧ್ಯಕ್ಷರೆ, ರಾ ಮೆಟೀರಿಯಲ್ಸ್ ಒಂದೊಂದು ಸಾರಿ ಇಲ್ಲಿ ದೊರೆತರೂ ಬೇರೆ ಕಡೆಯಿಂದ ತರುತ್ತಾರೆ ಮತ್ತು ಟ್ಯಾಕ್ಸ್ ಡಿಫರ್‌ಮೆಂಟ್ಸ್ ಕೊಟ್ಟಿದ್ದೀರಿ, ಅವರು 8-10 ವರ್ಷಗಳಾದ ಮೇಲೆ ಕಟ್ಟುತ್ತಾರೆ. Suppose after 8-10 years, if the industry is closed, then who is responsible for this money, which has already been accumulated. ಅದಕ್ಕೆ ನಾವು ವಿಷಯ ಸಮಿತಿಯಲ್ಲಿ ಈ ಸಾರಿ ಸಜೆಸ್ಟ್ ಮಾಡಿದ್ದೇವೆ, ಮತ್ತೆ ರೆಕಂಡೇಷನ್ ಸಹ ಮಾಡಿದ್ದೇವೆ. ಅದೇನೆಂದರೆ " to securitisation of that deferred payment" ಅದರ ಬಗ್ಗೆ ಏನಾದರೂ ಮೆನ್‌ಷನ್ ಮಾಡಬೇಕಾಗುತ್ತದೆ. ಇದೊಂದು ಅವಕಾಶ ನಿಮಗೆ ರಿವೈಸ್ಡ್ ಬಿಲ್ ತರುವುದಕ್ಕೆ ಸಿಕ್ಕಿದೆ. ಏಕೆಂದರೆ ನೀವು ಎಷ್ಟು ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಿ ಇಟ್ಟುಕೊಂಡಿರುತ್ತೀರಿ? ಒಂದು ವೇಳೆ ಆ ಕೈಗಾರಿಕೆ ಮುಚ್ಚಿಬಿಟ್ಟರೆ, ಬ್ಯಾಂಕ್ ಗ್ಯಾರಂಟಿ ಇರುವುದಿಲ್ಲ, ಬೇರೆ ಯಾವ ಸೆಕ್ಯೂರಿಟಿಯೂ ಇರುವುದಿಲ್ಲ, ಅಂತಹ ಸಂದರ್ಭದಲ್ಲಿ to securitise the deferred payment, we have to make some arrangement- ಅದನ್ನು ಈ ಬಿಲ್ ನಲ್ಲಿ ತರುವುದಕ್ಕೆ ಅವಕಾಶ ಮಾಡಿದ್ದರೆ ಅನುಕೂಲವಾಗುತ್ತಿತ್ತೆಂದು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ರಾ ಮೆಟೀರಿಯಲ್ಸ್ ಅನ್ನು ಮುಖ್ಯವಾಗಿ ಇವತ್ತು ಸಣ್ಣ ಕೈಗಾರಿಕೆಗೆ ಉತ್ತೇಜನ ಕೊಡುವುದಕ್ಕೆ ಪ್ರೈಸ್ ಪ್ರಿಪರೆನ್ಸ್, ಪರ್ಚೇಸ್ ಪ್ರಿಫರೆನ್ಸ್ ಎರಡೂ

ಇಟ್ಟಿದ್ದೇವೆ. ಆದರೆ ಕೆಲವು ಕಡೆ ಸರ್ಕಾರಿ ಸ್ವಾಮಿತ್ವದ ಕೈಗಾರಿಕೆಗಳಲ್ಲಿ, ಕಾರ್ಪೊರೇಷನ್ಸ್ ಗಳಲ್ಲಿ ಜಾರಿಗೆ ತರುತ್ತಿದ್ದಾರೆಂಬುದು ನಮ್ಮ ಗಮನಕ್ಕೆ ಬಂದಿದೆ. ನಾವೂ ಕೂಡ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇವತ್ತು ರಾ ಮೆಟೀರಿಯಲ್ ಕರ್ನಾಟಕ ರಾಜ್ಯದಲ್ಲೇ ಸಿಗುವುದಿದ್ದರೆ, ಅದನ್ನು ಸರ್ಕಾರಿ ಸ್ವಾಮಿತ್ವದ ಕೈಗಾರಿಕೆಗಳು ತರುತ್ತಿದ್ದರೆ, ಆ ಗುಣಮಟ್ಟ, ಆ ರೇಟ್ ಎಲ್ಲಾ ಸರಿ ಇದ್ದರೆ, ತಾವು ಸ್ಪಷ್ಟವಾಗಿ ನಮೂದು ಮಾಡಿದರೆ ಖಂಡಿತವಾಗಿಯೂ ಅದನ್ನು ಅವರ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎರಡನೇಯದಾಗಿ ಈಗ ಡೆಫರ್‌ಮೆಂಟ್ ನಾವು ಕೊಡುವುದಿಲ್ಲ ಅಥವಾ ಇನ್‌ಸೆಂಟಿವ್ಸ್ ಕೊಡುವುದಿಲ್ಲ, ಒಂದು ಕಾಲದಲ್ಲಿ ಕೊಟ್ಟಿದ್ದು ನಿಜ. So, why we gave to attract investors ಇವತ್ತು ಕೈಗಾರಿಕೆಗಳು ಬರಬೇಕಾದರೆ; ಏನೊಂದು ಇನ್ಸೆಟೀವ್ಸ್ ಇತ್ತು: ಅಮೇರಿಕದಲ್ಲಿ, Governors used to go to U.K. Europe all the countries to attract investments by giving large incentives. For your information ಇವತ್ತು ಡೆಫರ್‌ಮೆಂಟ್ ಎಲ್ಲಾ ನಾವು ಕೊಡುತ್ತಿಲ್ಲ, ಏಕೆಂದರೆ ರಾಷ್ಟ್ರಮಟ್ಟದಲ್ಲೇ Stop ಮಾಡಿದ್ದೇವೆ. ಆದುದರಿಂದ ಕೈಗಾರಿಕೆ ಅನಾರೋಗ್ಯವಾದರೆ ಏನಾಗಬಹುದೆನ್ನುವ ಪ್ರಶ್ನೆ ಈಗ ಬರುವುದಿಲ್ಲ, ಏಕೆಂದರೆ ಡೆಫರ್‌ಮೆಂಟ್ ಕೊಡುವ ಸಂದರ್ಭವಿಲ್ಲ.

ಶ್ರೀ ಎಸ್. ಯೋಗೀಶ್‌ಭಟ್: ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳಿಗೆ ಹಣಹೂಡಿಕೆ ಉತ್ತೇಜನ ಎನ್ನುವ ಒಂದಂಶವಿದೆ, ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ, ವಿಶೇಷವಾಗಿ ಮಂಗಳೂರು ವಲಯಕ್ಕೆ ಐಟಿ ಪಾರ್ಕಿಗೆ ಕ್ರಿಟಿಕಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟಿಲ್ ಫಂಡ್‌ನಿಂದ ಕೇಂದ್ರ ಸರ್ಕಾರದಿಂದ ಹದಿನೇಳೂವರೆ ಕೋಟಿ ರೂಪಾಯಿ ಮಂಜೂರಾಗಿದೆ. ಅದರಲ್ಲಿ ಎರಡು ಕೋಟಿ ರೂಪಾಯಿ ನಮ್ಮ ಕರ್ನಾಟಕ ರಾಜ್ಯಕ್ಕೆ ಬಿಡುಗಡೆ ಮಾಡಿ ಒಂದು ವರ್ಷದ ನಂತರ ಮಹಾನಗರ ಪಾಲಿಕೆಗೆ ಹಣ ಬಂತು. ಒಂದು ಕಡೆ ಉತ್ತೇಜನವೆಂದು ಹೇಳುತ್ತೇವೆ, ಇನ್ನೊಂದು ಕಡೆ ವಿಳಂಬ ನೀತಿ ಇರೆ. ಅದನ್ನು ಮಾರ್ಚ್ 2002 ರಲ್ಲಿ ಬಂದಿದೆ ಮಾರ್ಚ್ 2003ಕ್ಕೆ ಬಿಡುಗಡೆ ಮಾಡಿ ಮಾರ್ಚ್ ಎಂಡ್ ಒಳಗೆ ನೀವು ಯುಟಿಲೈಜೇಷನ್ ಸರ್ಟಿಫಿಕೇಟ್ ಕೊಡಬೇಕೆಂದು ಆದೇಶ ಹೊರಡಿಸಿದ್ದಾರೆ, ಅದನ್ನು ಆರಂಭದಲ್ಲೇ ಕೊಟ್ಟರೆ ಅದರ ಸದುಪಯೋಗ ಮಾಡಿಕೊಂಡು ಯುಟಿಲೈಜೇಷನ್ ಸರ್ಟಿಫಿಕೇಟ್ ಕೊಟ್ಟು ಹದಿನೇಳೂವರೆ ಕೋಟಿ ರೂಪಾಯಿಗೆ ಮುಂದಿನ ಯೋಜನೆಯನ್ನು ಹಾಕುವುದಕ್ಕೆ ಸಾಧ್ಯವಾಗುತ್ತಿತ್ತು. ಈ ಕಡೆ ಉತ್ತೇಜನವೆಂದು ಹೇಳುತ್ತೀರಿ ಈ ಕಡೆ ತೊಂದರೆ ಮಾಡುವುದಕ್ಕೆ ಅವಕಾಶ ಕೊಡಬಾರದು. ಇನ್‌ವೆಸ್ಟರ್ಸ್ ಮೀಟ್ ಅನ್ನು ವಿಶೇಷವಾಗಿ ಕೋಸ್ಟಲ್ ಎಕಾನಮಿಕ್ ಜೋನ್‌ಗೆ ಸಂಬಂಧಿಸಿದಂತೆ ತಾವೇನು ಯೋಚನೆ ಮಾಡಿದ್ದೀರಿ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ: ಸ್ಪೆಷಲ್ ಎಕಾನಾಮಿಕ್ ಜೋನ್ ಬಗ್ಗೆ 30.7.2003ರಂದು ದೆಹಲಿಯಲ್ಲಿ ಸಭೆಯಾಗಿ ಹಾಸನಕ್ಕೆ ಸ್ಪೆಷಲ್ ಎಕನಾಮಿಕ್ ಜೋನ್‌ಗೆ ಮಾನ್ಯತೆ ಕೊಡುವುದಕ್ಕೆ ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಆ ಸಭೆಗೆ ನಮ್ಮ ಪ್ರಧಾನ ಕಾರ್ಯದರ್ಶಿಗಳು ಹಾಗೂ ಇತರೆ ಅಧಿಕಾರಿಗಳೆಲ್ಲಾ ಅಟೆಂಡ್ ಆಗಿದ್ದರು. ಅಧ್ಯಕ್ಷರು, ಮಂಗಳೂರು ಛೇಂಬರ್ಸ್ ಆಫ್ ಕಾಮರ್ಸ್ ಅವರಿಗೂ ಸಹ ಹೋಗುವುದಕ್ಕೆ ಜೇಳಿದ್ದೆ, ಅದಕ್ಕೆ ಮಾನ್ಯತೆ ಬರಬಹುದು, ಅಧಿಕೃತವಾಗಿ ಇನ್ನೂ ನಮಗೆ ತಿಳಿಸಿಲ್ಲ, ಆದರೆ ಸಭೆಯಲ್ಲಿ ಅವರು ಹೇಳಿದ್ದಾರೆ. So believe that, it is cleared, as far as coastal economic zone is concerned Udupi, Mangalore and

Uttara Kannada District ಈ ಮೂರು ಜಿಲ್ಲೆಗಳು ಸೇರಿ ಒಂದು ಮಾಡಬೇಕು ಎಂಬ ಒಂದು ಸಲಹೆ ಇತ್ತು, ಮೂರು ಮಾಡಿದರೆ ಕಷ್ಟವಾಗಬಹುದು, ಒಂದನ್ನು ಮಾಡಿ ಎಂದು ಕೇಂದ್ರ ಸರ್ಕಾರ ಸಲಹೆ ಮಾಡಿದೆ. ಈ ಬಗ್ಗೆ ಮೇಲ್ಮನೆಯಲ್ಲಿ ಡಾ: ಆಚಾರ್ಯರವರು ಉಡುಪಿಲ್ಲಾಗಬೇಕೆಂದು ಹೇಳಿದ್ದಾರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಾಗಬೇಕೆಂದು ತಾವು ಹೇಳುತ್ತಿದ್ದೀರಿ, ಮತ್ತೊಬ್ಬ ಎಂಎಲ್‌ಎ ರವರು ಉತ್ತರ ಕನ್ನಡ ಜಿಲ್ಲೆಯಲ್ಲಾಗಬೇಕೆಂದು ಹೇಳುತ್ತಾರೆ, ಆಗ ನಿರ್ಣಯ ಮಾಡಿ, ಎಲ್ಲಿ ಮೂಲಭೂತ ಸೌಕರ್ಯಗಳಿವೆ ಎನ್ನುವುದನ್ನು ತಿಳಿದುಕೊಂಡು ಮಾಡಬೇಕಾಗುತ್ತದೆ.

ಶ್ರೀ ಕೆ. ಅಭಯಚಂದ್ರ : ಸೂಕ್ತವಾದ ಸ್ಥಳ ಮಂಗಳೂರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಧ್ಯದಲ್ಲಿ ಉಡುಪಿಯಲ್ಲಿ ಮಾಡಿ,

ಶ್ರೀ ಎಸ್. ಯೋಗೀಶ್ ಭಟ್ : ಹಾರ್ಬರ್ ಪ್ರದೇಶ ಎಲ್ಲಿದೆ, ಆ ಪ್ರದೇಶದಲ್ಲಿ ಮಾಡುವುದು ಸೂಕ್ತ.

ಶ್ರೀ ಆರ್. ವಿ. ದೇಶಪಾಂಡೆ : ಆ ಬಗ್ಗೆ ಸರ್ಕಾರ ನಿರ್ಣಯ ಮಾಡುತ್ತದೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2002ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕವನ್ನು ಭಾರತದ ರಾಷ್ಟ್ರಪತಿಯವರಿಂದ ಹಿಂದಿರುಗಿಸಿದ್ದ ಮೇರೆಗೆ ಮನಃ ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ಕ್ಕೆ ತಿದ್ದುಪಡಿ:-

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ 2ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ. The Incloused, in definition after sub-clause (i), the following sub clause shall be inserted, namely,

"(ia)" Applicable Acts" menas the Factories Act, 1948, the Boilers Act, 1923, the Cotnract Labour (Regulation and Abolition) Act, 1970; the Employees State Insurance Act, 1948, the Minimum Wages Act, 1948, payement of Bonus Act, 1965, the Payment of Wages Act, 1936, the Maternitey Benefit Act, 1961, Gratuity Act, 1972, the Equal Remuneration Act, 1976 and the Karnataka Shops and Commercial Establishments Act, 1961."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "That In clause (2), in definition after sub clause(i) the following sub clause shall be userfed, namely:-

"(ia) 'Applicable Acts' means the Factories Act, 1948, the Boilers Act, 1923, the Contract Labour (Regulation and Abolition) Act, 1970, the Employees State Insurance Act, 1948, the Minimum Wages Act,

1948, the Payment of Bonus Act, 1965, the Payment of Wages Act, 1936, the Maternity Benefit Act, 1961, Gratuity Act, 1972, the Equal Remuneration Act, 1976 and the Karnataka Shops and Commercial Establishments Act, 1961".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 3 ರಿಂದ 13ರವರೆಗೆ ಎರಡೂ ಸೇರಿದಂತೆ,

ಅಧ್ಯಕ್ಷರು : "ಖಂಡ 3ರಿಂದ 13ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 3 ರಿಂದ 13ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 14ಕ್ಕೆ ತಿದ್ದುಪಡಿ:-

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, "ಖಂಡ 14ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ;

"That in Clause 14, after the words "Central or State Act", the words except the application for Licensing of a Factory as provided in Section 41-A of the Factories Act, 1948' shall be inserted;"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"That in Clause 14, after the words 'Central or State Act', the words 'except the application for Licensing of a Factory as provided in Section 41-A of the Factories Act, 1948' Shall be inserted,'

ಪ್ರಸ್ತಾವ ಮಂಡಿಸಲಾಯಿತು

ಖಂಡ 14 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 14 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 14 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 15ಕ್ಕೆ ತಿದ್ದುಪಡಿ:

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, "ಖಂಡ 15ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ;

"That in Clause 15, after the words "Combined Application Form", the words 'and thereafter once in a year' shall be added;"

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"That in Clause 15, after the words "Combined Application Form", the words 'and thereafter once in a year' shall be added;"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 15 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 15 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 15 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 16ಕ್ಕೆ ತಿದ್ದುಪಡಿ:

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, "ಖಂಡ 16ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ;

"That in Clause 16, after the words 'Chief Inspector of Factories and Boilers', the words representatives of the Employees State Insurance Corporation and the Employees Provident Fund Organization' shall be inserted."

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"That in Clause 16, after the words 'Chief Inspector of Factories and Boilers', the words representatives of the Employees State Insurance Corporation and the Employees Provident Fund Organization' shall be inserted."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 16 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 16 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 16 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 17 ರಿಂದ 23ರವರೆಗೆ ಎರಡೂ ಸೇರಿದಂತೆ

ಅಧ್ಯಕ್ಷರು: "ಖಂಡ 17ರಿಂದ 23ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 17 ರಿಂದ 23 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕವನ್ನು ಭಾರತದ ರಾಷ್ಟ್ರಪತಿಯವರಿಂದ ಹಿಂದಿರುಗಿಸಿದ್ದ ಮೇರೆಗೆ ಈ ಸಭೆಯು ತಿದ್ದುಪಡಿಗಳೊಂದಿಗೆ ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2002ರ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ವಿಧೇಯಕವನ್ನು ಭಾರತದ ರಾಷ್ಟ್ರಪತಿಯವರಿಂದ ಹಿಂದಿರುಗಿಸಿದ್ದ ಮೇರೆಗೆ ಈ ಸಭೆಯು ತಿದ್ದುಪಡಿಗಳೊಂದಿಗೆ ಪುನರ್ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ii)ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2003

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, "2003ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಇದರ ಬಗ್ಗೆ ತಾವು ವಿವರಿಸಿ ಹೇಳಿ. ವಿಧೇಯಕದ ಉದ್ದೇಶವೇನು ಎಂದು ಹೇಳಿ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ಆಗಬೇಕಾಗಿದ್ದಂಥ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ಮೂರು ತಿಂಗಳು ಮುಂದಕ್ಕೆ ಹಾಕುವಂಥ ಒಂದು ಆರ್ಡಿನೆನ್ಸ್ ತಂದದ್ದು ತಮಗೆಲ್ಲಾ ಗೊತ್ತಿದೆ. ಚುನಾವಣೆಯನ್ನು ಮೂರು ತಿಂಗಳು ಮುಂದಕ್ಕೆ ಹಾಕಲು ಕಾರಣವೇನೆಂದರೆ, ಆಗ ರಾಜ್ಯದಲ್ಲಿ ಬರಗಾಲವಿದ್ದುದ್ದರಿಂದ ಚುನಾವಣೆಯನ್ನು ಮುಂದಕ್ಕೆ ಹಾಕುವ ವಿಚಾರ ಕ್ಯಾಬಿನೆಟ್‌ನಲ್ಲಿ ಬಂದು, ದಿನಾಂಕ 6-9-02 ರಂದು ಒಂದು ಆರ್ಡಿನೆನ್ಸ್ ಹೊರಡಿಸಿ ಅದನ್ನು ಮುಂದಕ್ಕೆ ಹಾಕಿದ್ದೆವು. ಆಗ ಮುಂದಕ್ಕೆ ಹಾಕಿದ ಚುನಾವಣೆಗಳು ಡಿಸೆಂಬರ್ 2002 ಮತ್ತು ಜನವರಿ 2003ರಲ್ಲಿ ಪೂರ್ತಿ ಆಗಿವೆ. ಆಗ ಮಾಡಿದಂಥ ಆರ್ಡಿನೆನ್ಸನ್ನು ರೀಪ್ಲೇಸ್ ಮಾಡುವುದಕ್ಕೋಸ್ಕರವಾಗಿ ಈ ವಿಧೇಯಕವನ್ನು